ಕನ್ನಡ ವಿಶ್ವವಿದ್ಯಾಲಯ

# ಅಧಿನಿಯಮ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

**Kannada Vishwavidyalaya Adhiniyama**

*Published by*
**Registrar**
Kannada University. Hampi
Vidyaranya 583 276

Pages : VIII + 60,

First Impression : 2008

www. kannadauniversity.org



© ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮



*ಪ್ರಕಾಶಕರು*
**ಕುಲಸಚಿವರು**
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮುಖಚಿತ್ರ : ಕೆ. ಕೆ. ಮಕಾಳಿ

*ಅಕ್ಷರ ಸಂಯೋಜನೆ*
ವಿದ್ಯಾರಣ್ಯ ಗಣಕ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ

*ಮುದ್ರಣ*
ವಿರಾಳಂ ಗ್ರಾಫಿಕ್ಸ್, ಬೆಂಗಳೂರು


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ ೪ - ಸೆಕ್ಷನ್ ೨ ಬಿ

---

ಬೆಂಗಳೂರು ಮಂಗಳವಾರ ಮೇ ೨೧, ೧೯೯೧

(ವೈಶಾಖ ೩೧, ಶಕ ವರ್ಷ ೧೯೧೩)

---

ನಂ: ೩೩೭

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

**ಅಧಿಸೂಚನೆ**

ಸಂ. ಲಾ. ೧೮ ಎಲ್.ಜಿ.ಎನ್. ೮೮ ಬೆಂಗಳೂರು ದಿನಾಂಕ ೨೧ ಮೇ ೧೯೯೧

ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ ೧೯೯೧ಕ್ಕೆ ೧೯೯೧ರ ಮೇ ೧೮ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಅದನ್ನು ಕರ್ನಾಟಕ ಅಧಿನಿಯಮ ೧೯೯೧ರ ಸಂಖ್ಯೆ ೨೩ ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

ಕರ್ನಾಟಕ ಅಧಿನಿಯಮ ೧೯೯೧ರ ಸಂಖ್ಯೆ ೨೩

(೧೯೯೧ರ ಮೇ ೨೧ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

## ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ, ೧೯೯೧

(೧೯೯೧ರ ಮೇ ೧೮ನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)

ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಮತ್ತು ನಿಗಮನಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಪ್ರಾಚೀನವಾದ ಮತ್ತು ಉಜ್ವಲವಾದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಪ್ರದಾಯ ಮತ್ತು ಪರಂಪರೆಯನ್ನು ಹೊಂದಿರುವ ಮತ್ತು ಗದ್ಯ, ಪದ್ಯ, ನಾಟಕ, ನೃತ್ಯ, ಶಿಲ್ಪ ಶಾಸ್ತ್ರ, ವರ್ಣಚಿತ್ರ, ವೈದ್ಯ, ತತ್ವಶಾಸ್ತ್ರ ಮತ್ತು ಅದರ ಕೊಡುಗೆಯು, ಇಂದಿನವರೆಗೂ ಭಾರತೀಯ ವಿದ್ವಾಂಸರು ಅರಿತಿರುವುದಕ್ಕಿಂತಲೂ ಎಷ್ಟೋ ವಿಸ್ತಾರವಾಗಿಯೂ ದೀರ್ಘಕಾಲ ಉಳಿಯುವಂಥದೂ ಆಗಿರುವ ಕನ್ನಡ ಭಾಷೆಗೆಂದೇ ಪ್ರತ್ಯೇಕವಾದ ವಿಶ್ವವಿದ್ಯಾಲಯವನ್ನು ರಚಿಸುವುದು ಯುಕ್ತವಾಗಿರುವುದರಿಂದ.

ಮತ್ತು ಕನ್ನಡದಲ್ಲಿ ಕಲಿಕೆಯ ಮುನ್ನಡೆಯನ್ನು ಮತ್ತು ಸಂಶೋಧನೆ ನಡೆಸುವುದನ್ನು ಸಾಧಿಸುವುದಕ್ಕಾಗಿ ಏಕಘಟಕೀಯ ಮತ್ತು ನಿವಾಸೀಸ್ವರೂಪದ ಒಂದು ವಿಶ್ವವಿದ್ಯಾಲಯ ಸ್ಥಾಪನೆಯು ಅಪೇಕ್ಷಾರ್ಹವಾದುದರಿಂದ;

ಭಾರತ ಗಣರಾಜ್ಯದ ನಲವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

# ಪರಿವಿಡಿ

## ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ ೧೯೯೧


ಅಧ್ಯಾಯ ಒಂದು

ಪ್ರಾರಂಭಿಕ / ೧

೧. ಚಿಕ್ಕ ಹೆಸರು ಮತ್ತು ಪ್ರಾರಂಭ / ೧

೨. ಪರಿಭಾಷೆಗಳು / ೧

ಅಧ್ಯಾಯ ಎರಡು

ವಿಶ್ವವಿದ್ಯಾಲಯ / ೩

೩. ವಿಶ್ವವಿದ್ಯಾಲಯದ ಸ್ಥಾಪನೆ / ೩

೪. ವಿಶ್ವವಿದ್ಯಾಲಯದ ಉದ್ದೇಶಗಳು / ೩

೫. ವಿಶ್ವವಿದ್ಯಾಲಯದ ಅಧಿಕಾರಿಗಳು / ೬

೬. ವಿಶ್ವವಿದ್ಯಾಲಯಕ್ಕೆ ಪ್ರವೇಶ / ೮

೭. ಸದಸ್ಯತ್ವಕ್ಕೆ ಅನರ್ಹತೆ / ೮

೮. ಕೆಲವು ಸಂದರ್ಭಗಳಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಗೆ ನಾಮ ನಿರ್ದೇಶಿತರಾಗಲು ಅನರ್ಹತೆ / ೯

೯. ಪರಿಶೀಲನೆ / ೧೦

೧೦. ವಿಶ್ವವಿದ್ಯಾಲಯದ ಅಧಿಕಾರಿಗಳು / ೧೨

೧೧. ಕುಲಾಧಿಪತಿಯವರು / ೧೨

೧೨. ಪ್ರೊ-ಚಾನ್ಸಲರ್ / ೧೩

೧೩. ಕುಲಪತಿಯವರು / ೧೪

೧೪. ಕುಲಪತಿಯವರ ಅಧಿಕಾರಿಗಳು ಮತ್ತು ಕರ್ತವ್ಯಗಳು / ೧೫

೧೫. ಕುಲಸಚಿವರು / ೧೭

೧೬. ಹಣಕಾಸು ಅಧಿಕಾರಿ / ೧೮

೧೭. ವಿಶ್ವವಿದ್ಯಾಲಯದ ಪ್ರಾಧಿಕಾರಗಳು / ೧೮

೧೮. ಕುಲಪತಿ ಮತ್ತು ಇತರ ಅಧಿಕಾರಿಗಳು ಮುಂತಾದವರು ಲೋಕ ನೌಕರರಾಗಿರಬೇಕು. / ೧೮

**ಅಧ್ಯಾಯ ಮೂರು**

**ಆಡಳಿತ ಮಂಡಲಿ / ೧೯**

೧೯. ಆಡಳಿತ ಮಂಡಲಿ / ೧೯

೨೦. ಆಡಳಿತ ಮಂಡಲಿಯಿಂದ ಸ್ಥೂಲ ಶಿಕ್ಷಣ ನೀತಿಗಳು ಮತ್ತು ಕಾರ್ಯಕ್ರಮಗಳು ಮತ್ತು ವಿಶ್ವವಿದ್ಯಾಲಯದ ಪ್ರಕಾರ್ಯಗಳ ಪುನರವಲೋಕನ / ೨೦

೨೧. ಆಡಳಿತ ಮಂಡಲಿಯ ಸಭೆಗಳು / ೨೨

**ಅಧ್ಯಾಯ ನಾಲ್ಕು**

**ಕಾರ್ಯಕಾರಿ ಸಮಿತಿ / ೨೩**

೨೨. ಕಾರ್ಯಕಾರಿ ಸಮಿತಿ / ೨೩

೨೩. ಕಾರ್ಯಕಾರಿ ಸಮಿತಿಯ ಅಧಿಕಾರಗಳು / ೨೫

೨೪. ಕಾರ್ಯಕಾರಿ ಸಮಿತಿಯ ಸಭೆ / ೩೦

೨೫. ವಾರ್ಷಿಕ ವರದಿ / ೩೧

೨೬. ವಾರ್ಷಿಕ ಲೆಕ್ಕ ಪತ್ರಗಳು / ೩೧

**ಅಧ್ಯಾಯ ಐದು**

**ಫ್ಯಾಕಲ್ಟಿಗಳು, ಅಧ್ಯಯನ ಮಂಡಲಿಗಳು, ಹಣಕಾಸಿನ ಸಮಿತಿ ಮತ್ತು ಇತರ ಅಧಿಕಾರಗಳು / ೩೩**

೨೭. ಫ್ಯಾಕಲ್ಟಿಗಳ ರಚನೆ ಮತ್ತು ಪ್ರಕಾರ್ಯಗಳು / ೩೩

೨೮. ಅಧ್ಯಯನ ಮಂಡಲಿಗಳು / ೩೩

೨೯. ಇತರ ಪ್ರಾಧಿಕಾರಗಳ ರಚನೆ / ೩೩

೩೦. ಹಣಕಾಸು ಸಮಿತಿ / ೩೪

**ಅಧ್ಯಾಯ ಆರು**

**ಪರಿನಿಯಮಗಳು / ೩೬**

೩೧. ಪರಿನಿಯಮಗಳು / ೩೬

೩೨. ಪರಿನಿಯಮಗಳ ರಚನಾ ವಿಧಾನ / ೩೮

**ಅಧ್ಯಾಯ ಏಳು**

**ವಿಶ್ವವಿದ್ಯಾಲಯದ ನಿಧಿಗಳು / ೩೯**

೩೩. ಸಾಮಾನ್ಯ ನಿಧಿಗಳು / ೩೯

**ಅಧ್ಯಾಯ ಎಂಟು**

**ಸೇವಾ ಷರತ್ತುಗಳು / ೪೦**

೩೪. ನಿವೃತ್ತಿ ವೇತನ, ಉಪದಾನ ಮೊದಲಾದವುಗಳು / ೪೦

೩೫. ಸೇವಾ ಷರತ್ತುಗಳು / ೪೦

೩೬. ಇಲಾಖಾ ಮುಖ್ಯಸ್ಥರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು / ೪೧

೩೭. ಫ್ಯಾಕಲ್ಟಿಗಳ ಡೀನರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು / ೪೨

**ಅಧ್ಯಾಯ ಒಂಬತ್ತು**

**ಸಂಕೀರ್ಣ / ೪೩**

೩೮. ಆಕಸ್ಮಿಕ ರಿಕ್ತಸ್ಥಾನಗಳನ್ನು ಭರ್ತಿ ಮಾಡುವುದು / ೪೩

೩೯. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ವ್ಯವಹರಣೆಗಳ ರಿಕ್ತಸ್ಥಾನಗಳು ಇರುವುದರಿಂದ ಅಮಾನ್ಯವಾಗತಕ್ಕುದಲ್ಲ / ೪೩

೪೦. ವಿಶ್ವವಿದ್ಯಾಲಯದ ಸದಸ್ಯತ್ವದಿಂದ ತೆಗೆದು ಹಾಕುವುದು / ೪೪

೪೧. ವಿಶ್ವವಿದ್ಯಾಲಯ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಗೆ ಸಂಬಂಧಪಟ್ಟ ವಿವಾದಗಳು / ೪೫

೪೨. ಸಮಿತಿಗಳ ರಚನೆ / ೪೫

೪೩. ಮಾಹಿತಿಗಳನ್ನು ಪಡೆಯಲು ಅಧಿಕಾರ / ೪೫
೪೪. ಪ್ರಥಮ ಕುಲಪತಿಯವರ ನೇಮಕಾತಿ / ೪೬
೪೫. ಪ್ರಥಮ ಕುಲಸಚಿವರ ನೇಮಕಾತಿ / ೪೬
೪೬. ಪ್ರಥಮ ಹಣಕಾಸು ಅಧಿಕಾರಿ ನೇಮಕಾತಿ / ೪೭
೪೭. ಪ್ರಥಮ ಕುಲಪತಿಯವರ ತಾತ್ಕಾಲಿಕ ಅಧಿಕಾರಗಳು / ೪೭
೪೮. ನೇಮಕಾತಿ ವಿಶೇಷ ವಿಧಾನ / ೪೮
೪೯. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ / ೪೮
೫೦. ತೊಂದರೆಗಳನ್ನು ನಿವಾರಿಸಲು ಅಧಿಕಾರ / ೪೮

**ಅನುಸೂಚಿ : ೩೨(೧)ನೇ ಪ್ರಕರಣವನ್ನು ನೋಡಿ**

**ವಿಶ್ವವಿದ್ಯಾಲಯದ ಮೊದಲನೇ ಪರಿನಿಯಮಗಳು / ೫೦**

೧. ಕುಲಸಚಿವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು / ೫೦
೨. ಹಣಕಾಸು ಅಧಿಕಾರಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು / ೫೨
೩. ಫ್ಯಾಕಲ್ಟಿಗಳು ಮತ್ತು ವಿಭಾಗಗಳು / ೫೪
೪. ಫ್ಯಾಕಲ್ಟಿಗಳ ಡೀನರು / ೫೬
೫. ಆಯ್ಕೆ ಸಮಿತಿಗಳು / ೫೬

# ಅಧ್ಯಾಯ ಒಂದು

## ಪ್ರಾರಂಭಿಕ

**೧. ಚಿಕ್ಕ ಹೆಸರು ಮತ್ತು ಪ್ರಾರಂಭ :**

೧. ಈ ಅಧಿನಿಯಮವನ್ನು ಕನ್ನಡ ವಿಶ್ವವಿದ್ಯಾಲಯ ಅಧಿನಿಯಮ, ೧೯೯೧ ಎಂದು ಕರೆಯತಕ್ಕುದು.

೨. ಇದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಯಲ್ಲಿ ಬರತಕ್ಕುದು.

**೨. ಪರಿಭಾಷೆಗಳು :** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

ಎ. "ಗೊತ್ತುಪಡಿಸಿದ ದಿನಾಂಕ" ಎಂದರೆ ಅಧಿನಿಯಮದ ಪ್ರಾರಂಭದ ದಿನಾಂಕ;

ಬಿ. "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

ಸಿ. "ಹಾಸ್ಟೆಲ್" ಎಂದರೆ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿಶ್ವವಿದ್ಯಾಲಯದಿಂದ ನಿರ್ವಹಿಸಲಾದ ಅಥವಾ ಮಾನ್ಯತೆ ಪಡೆದ ವಸತಿಯ ಒಂದು ಘಟಕ ಮತ್ತು ಇದು ಈ ಅಧಿನಿಯಮದ ಅಡಿಯಲ್ಲಿ ವಿಶ್ವವಿದ್ಯಾಲಯದಿಂದ ಹಾಗೆಂದು ಮಾನ್ಯತೆ ಪಡೆದ ಒಂದು ಹಾಸ್ಟೆಲನ್ನು ಒಳಗೊಳ್ಳುತ್ತದೆ.

ಡಿ. "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮತ್ತು ಪರಿನಿಯಮಗಳಿಂದ ನಿಯಮಿಸಲಾದುದು;

ಇ. "ಪರಿನಿಯಮಗಳು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ವಿಶ್ವವಿದ್ಯಾಲಯದ ಪರಿನಿಯಮಗಳು;

ಎಫ್. ''ಬೋಧಕರು'' ಎಂದರೆ, ಪ್ರಾಧ್ಯಾಪಕರು, ವಿಶ್ರಾಂತ ಪ್ರಾಧ್ಯಾಪಕರು, ರೀಡರುಗಳು, ಉಪನ್ಯಾಸಕರು ಮತ್ತು ಪರಿನಿಯಮಗಳಿಂದ ಬೋಧಕರೆಂದು ಘೋಷಿತರಾಗಬಹುದಾದ ಇತರೆ ಅಂಥ ವ್ಯಕ್ತಿಗಳು;

ಜಿ. ''ವಿಶ್ವವಿದ್ಯಾಲಯ'' ಎಂದರೆ, ೩ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಕನ್ನಡ ವಿಶ್ವವಿದ್ಯಾಲಯ;

ಎಚ್. ''ವಿಶ್ವವಿದ್ಯಾಲಯ ಅನುದಾನ ಆಯೋಗ'' ಎಂದರೆ ವಿಶ್ವವಿದ್ಯಾಲಯ ಅನುದಾನ ಆಯೋಗ ಅಧಿನಿಯಮ, ೧೯೫೬ (೧೯೫೬ರ ಕೇಂದ್ರಾಧಿನಿಯಮ (೩)ರ ೪ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಆಯೋಗ;

ಐ. ''ವಿಶ್ವವಿದ್ಯಾಲಯ ಗ್ರಂಥಾಲಯ'' ಎಂದರೆ ವಿಶ್ವವಿದ್ಯಾಲಯದಿಂದ ಪ್ರಾರಂಭಿಸಿರಲಿ ಅಥವಾ ಇಲ್ಲದಿರಲಿ, ಅದರಿಂದ ನಿರ್ವಹಿಸಲಾದ ಗ್ರಂಥಾಲಯ.



# ಅಧ್ಯಾಯ ಎರಡು

# ವಿಶ್ವವಿದ್ಯಾಲಯ

**೩. ವಿಶ್ವವಿದ್ಯಾಲಯದ ಸ್ಥಾಪನೆ :**

೧. ಕನ್ನಡದಲ್ಲಿ ಕಲಿಕೆಯ ಮುನ್ನಡೆಯನ್ನು ಮತ್ತು ಸಂಶೋಧನೆಯನ್ನು ಸಾಧಿಸುವುದಕ್ಕಾಗಿ, 'ಕನ್ನಡ ವಿಶ್ವವಿದ್ಯಾಲಯ' ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದು.

೨. ವಿಶ್ವವಿದ್ಯಾಲಯವು ಒಂದು ನಿಗಮಿತ ನಿಕಾಯವಾಗಿರತಕ್ಕದು ಮತ್ತು ಶಾಶ್ವತ ಉತ್ತರಾಧಿಕಾರಿಯನ್ನು ಹೊಂದಿದ್ದು ಸಾಮಾನ್ಯ ಮೊಹರನ್ನು ಹೊಂದಿ ತಕ್ಕುದು ಹಾಗೂ ಸದರಿ ಹೆಸರಿನಿಂದ ದಾವೆ ಹೂಡತಕ್ಕದು ಮತ್ತು ದಾವೆಗೊಳಗಾಗತಕ್ಕುದು.

೩. ವಿಶ್ವವಿದ್ಯಾಲಯವು ಏಕಘಟಕೀಯ ಮತ್ತು ನಿವಾಸಿ ಸ್ವರೂಪದ್ದಾಗಿರತಕ್ಕುದು.

೪. ಸರ್ಕಾರದ ಮತ್ತು ಸಂಬಂಧಪಟ್ಟ ವಿಶ್ವವಿದ್ಯಾಲಯದ ಪೂರ್ವಾನುಮತಿಯ ಹೊರತು, ರಾಜ್ಯದಲ್ಲಿರುವ ಇತರ ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾದ ಸಹವರ್ತಿತವಾದ ಅಥವಾ ಅದರಿಂದ ನಿರ್ವಹಿಸಲಾದ ಯಾವ ಸಂಸ್ಥೆಗೂ ಯಾವುದೇ ಉದ್ದೇಶಕ್ಕೆ ಮಾನ್ಯತೆ ನೀಡತಕ್ಕುದಲ್ಲ.

೫. ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಸ್ಥಾನವು ಕಮಲಾಪುರದ ಮುನಿಸಿ ಪಾಲಿಟಿಯ ಪರಿಮಿತಿಗಳೊಳಗೆ ಅಥವಾ ಈ ಪರಿಮಿತಿಯ ಹತ್ತು ಕಿಲೋಮೀಟರು ಗಳ ತ್ರಿಜ್ಯದ ಪರಿಧಿಯೊಳಗಿರುವ ಯಾವುದೇ ಸ್ಥಳದಲ್ಲಿ ಇರತಕ್ಕುದು.

**೪. ವಿಶ್ವವಿದ್ಯಾಲಯದ ಉದ್ದೇಶಗಳು :-** ವಿಶ್ವವಿದ್ಯಾಲಯವು ಈ ಮುಂದಿನ ಉದ್ದೇಶಗಳನ್ನು ಹೊಂದಿರತಕ್ಕುದು:

೧. ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಮಟ್ಟದ ಸಂಶೋಧನಾ ಕೇಂದ್ರ ವಾಗಿ ಪ್ರಕಾರ್ಯ ನಡೆಸುವುದು.

೨. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಅಧ್ಯಯನ ಮಾಡಲು ಅಪೇಕ್ಷಿಸುವ ಭಾರತದೊಳಗೆ ಅಥವಾ ಹೊರಗೆ ವಾಸಿಸುತ್ತಿರುವವರಿಗೆ ತರಬೇತಿ ನೀಡುವುದು.

೩. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಆಧರಿಸಿ, ಲಲಿತ ಕಲೆ, ಸಂಸ್ಕೃತಿ, ಸಂಗೀತ, ರಂಗನಾಟಕಗಳು, ಜಾನಪದ ಕಲೆ, ವರ್ಣಚಿತ್ರ, ಶಿಲ್ಪಶಾಸ್ತ್ರ, ವಾಸ್ತುಶಿಲ್ಪ, ಸಾಹಿತ್ಯ, ವ್ಯಾಕರಣಶಾಸ್ತ್ರ, ಭಾಷಾಶಾಸ್ತ್ರ, ಇತಿಹಾಸ, ಧರ್ಮ, ತತ್ವಶಾಸ್ತ್ರ, ಭೂಗೋಳಶಾಸ್ತ್ರ, ನೌಕಾಗತಿ ಮತ್ತು ನೌಕಾಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಸಿದ್ಧ ವೈದ್ಯ, ಇಂಜಿನಿಯರಿಂಗ್ ವಿಜ್ಞಾನ ಮತ್ತು ಕರಕುಶಲತೆಯಂಥ ಕ್ಷೇತ್ರಗಳಲ್ಲಿ ಉಚ್ಚ ಶಿಕ್ಷಣ ಮತ್ತು ಸಂಶೋಧನೆಗೆ ಅನುಕೂಲ ಕಲ್ಪಿಸುವುದು ಮತ್ತು ಕ್ರಮಬದ್ಧಗೊಳಿಸುವುದು.

೪. ವಿಶ್ವವಿದ್ಯಾಲಯದ ಉದ್ದೇಶಗಳಿಗೆ ಹೊಂದಿಕೊಳ್ಳುವಂತೆ, ಅಗತ್ಯಕ್ಕನುಗುಣವಾಗಿ ಇತರ ಭಾಷೆಗಳಲ್ಲಿರುವ ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸುವುದು ಮತ್ತು ಕನ್ನಡದಲ್ಲಿರುವ ಪುಸ್ತಕಗಳನ್ನು ಇತರ ಭಾಷೆಗಳಿಗೆ ಸಹ ಭಾಷಾಂತರಿಸುವುದು.

೫. ತಾಳೆಗರಿಯಲ್ಲಿರುವ ಹಸ್ತಪ್ರತಿಗಳು ಮತ್ತು ಪ್ರಾಚೀನವಾದ ಅಪೂರ್ವ ಪುಸ್ತಕಗಳನ್ನು ಸಂರಕ್ಷಿಸಿಡುವುದು ಮತ್ತು ಪ್ರಕಟಿಸುವುದು.

೬. ಕನ್ನಡ ಭಾಷೆ ಮತ್ತು ಸಾಹಿತ್ಯ, ಕನ್ನಡ ಸಂಸ್ಕೃತಿ ಮತ್ತು ಕನ್ನಡಿಗರ ಇತಿಹಾಸಕ್ಕೆ ಸಂಬಂಧಿಸಿದ ಶಾಸನಗಳಿಗಾಗಿ ಶೋಧನೆ ನಡೆಸುವುದು ಮತ್ತು ಅವುಗಳನ್ನು ಸಂಗ್ರಹಿಸುವುದು ಮತ್ತು ಅದರ ಸಂಶೋಧನೆಯ ಆಧಾರದ ಮೇಲಣ ನಿರ್ಣಯಗಳೊಂದಿಗೆ ಅವುಗಳನ್ನು ಪ್ರಕಟಿಸುವುದು.

೭. ಕರ್ನಾಟಕದಲ್ಲಿರುವ ಕನ್ನಡಿಗರಿಂದ ಮತ್ತು ಭಾರತದ ಇತರ ಭಾಗಗಳಲ್ಲಿರುವ ಮತ್ತು ಇತರ ದೇಶಗಳಲ್ಲಿ ವಾಸಿಸುವ ಕನ್ನಡಿಗರಿಂದ ಬಳಸಲಾದ ಕನ್ನಡ ಪದಗಳು, ಅಭಿವ್ಯಕ್ತಿಗಳು, ಆಡುನುಡಿಗಳು, ಕೈಗಾರಿಕೆಗಳು ಮತ್ತು ಕೃಷಿಗೆ ಸಂಬಂಧಪಟ್ಟ ವಿಶಿಷ್ಟ ಪದಗಳನ್ನು ಸಂಗ್ರಹಿಸುವುದು ಮತ್ತು ಪ್ರಕಟಿಸುವುದು.

೮. ಭಾವೀ ವೈಜ್ಞಾನಿಕ ಬೆಳವಣಿಗೆಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಾಚೀನ ಕಾಲದಲ್ಲಿನ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಸಂಶೋಧನೆಗಾಗಿ ಏರ್ಪಾಡು ಮಾಡುವುದು.



೯. ಅಭಿವೃದ್ಧಿಶೀಲ ವಿಶ್ವದಲ್ಲಿರುವ ಎಲ್ಲ ಶೈಕ್ಷಣಿಕ ಕ್ಷೇತ್ರಗಳನ್ನು ತನ್ನಲ್ಲಿ ಅಡಕ ಮಾಡಿಕೊಂಡಿರುವ ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಸಂಬಂಧಪಟ್ಟಂತೆ ಸಂಶೋಧನೆಗೆ ಏರ್ಪಾಡು ಮಾಡುವುದು ಮತ್ತು ಆ ಬಗ್ಗೆ ಕಾರ್ಯ ವಿಧಾನವನ್ನು ನಿರ್ಧರಿಸುವುದು ಮತ್ತು ಅದಕ್ಕಾಗಿ ಸೂಕ್ತ ಮಾರ್ಗವನ್ನು ಕಂಡುಕೊಳ್ಳುವುದು.

೧೦. ಇತರ ಭಾರತೀಯ ಸಂಸ್ಕೃತಿಗೆ ಸಂಬಂಧಪಟ್ಟಂತೆ, ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಅಧ್ಯಯನವನ್ನು ಪ್ರಾರಂಭಿಸುವುದು.

೧೧. ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಪ್ರವೃತ್ತಿಗಳ ಆಳವಾದ ತಿಳುವಳಿಕೆಯ ಆಧಾರದ ಮೇಲೆ ಉಚ್ಚಶಿಕ್ಷಣ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ಸಂಘಟಿಸುವುದು.

೧೨. ಪ್ರಾಚೀನ ಕನ್ನಡ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಮತ್ತು ಪುನರ್‌ಶೋಧನೆ ಮಾಡುವ ದೃಷ್ಟಿಯಿಂದ ಪುರಾತತ್ವಶಾಸ್ತ್ರವನ್ನು ಅದರ ಎಲ್ಲ ವಿವಿಧ ಅಂಶಗಳ ಬಗ್ಗೆ ಉತ್ತೇಜನ ನೀಡುವುದು.

೧೩. ಭಾವೀ ಸಂಶೋಧನೆಗೆ ಅನುಕೂಲ ಮಾಡಿಕೊಡುವುದಕ್ಕಾಗಿ ರಾಜ್ಯದಲ್ಲಿಯ ಸ್ಮಾರಕಗಳನ್ನು ಕಾಪಾಡುವುದು.

೧೪. ಕಲೆ, ವಾಸ್ತುಶಿಲ್ಪ, ಶಿಲ್ಪಕಲೆ, ವರ್ಣಚಿತ್ರ, ಪ್ರತಿಮಾಶಾಸ್ತ್ರ, ಶಾಸನಶಾಸ್ತ್ರ, ರಂಗಭೂಮಿ, ನೃತ್ಯ, ಸಂಗೀತ, ಗುಡ್ಡಗಾಡಿನವರ ಕಲೆ, ಧರ್ಮ, ಜೀವನ ತತ್ತ್ವಜ್ಞಾನ, ಸಾಮಾಜಿಕ ಆಂದೋಲನ ಮುಂತಾದವುಗಳ ಮೂಲಕ ವ್ಯಕ್ತವಾಗಿರುವ ಕನ್ನಡ ಸಂಸ್ಕೃತಿಯನ್ನು ಸಂಯೋಜಿಸುವುದು.

೧೫. ಸಾಂಪ್ರದಾಯಿಕ, ಗುಡ್ಡಗಾಡು ಜನಪದ ಕಲೆ ಮತ್ತು ಪ್ರಸಕ್ತ ಕಲೆಗಳನ್ನು ದಾಖಲಿಸುವುದು, ವಿಶ್ಲೇಷಿಸುವುದು ಮತ್ತು ಸಂರಕ್ಷಿಸುವುದು.

೧೬. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಆಧುನಿಕ ಮುನ್ನಡೆಗಳಿಗೆ ಸಂಬಂಧಪಟ್ಟಂತೆ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಅಭಿವೃದ್ಧಿಗೊಳಿಸುವುದು.

೧೭. ಇತರ ದ್ರಾವಿಡ ಮತ್ತು ಆರ್ಯ ಭಾಷೆಗಳೊಂದಿಗೆ ಕನ್ನಡದ ತೌಲನಿಕ ಅಧ್ಯಯನವನ್ನು ಬೆಳೆಸುವುದು.

೧೮. ಉತ್ಕೃಷ್ಟ, ಮಾದರಿಯ ವಸ್ತುಗಳು ಮತ್ತು ಕರ್ನಾಟಕ ಕಲಾಕೃತಿಗಳನ್ನು ಸಂಗ್ರಹಿಸಿಡಲು ಒಂದು ಸಂಗ್ರಹಾಲಯವನ್ನು ನಿರ್ಮಿಸುವುದು.

೫. **ವಿಶ್ವವಿದ್ಯಾಲಯದ ಅಧಿಕಾರಗಳು** - ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದು

೧. ಧರ್ಮ, ಪಂಥ, ಜಾತಿ, ಲಿಂಗ, ವರ್ಗ ಅಥವಾ ಇವುಗಳಲ್ಲಿ ಯಾವುದನ್ನೂ ಗಣಿಸದೆ ಪದವಿಗಳು, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ನೀಡಲು ಏರ್ಪಾಡು ಮಾಡುವುದು:

೨. ವಿಶ್ವವಿದ್ಯಾಲಯದಲ್ಲಿ ಅಥವಾ ನಿಯಮಿಸಲಾದ ಷರತ್ತುಗಳ ಮೇರೆಗೆ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಇತರ ಯಾವುದೇ ಸಂಸ್ಥೆ ಅಥವಾ ಕೇಂದ್ರದಲ್ಲಿ ಸಂಶೋಧನೆಯನ್ನು ಪೂರೈಸಿದ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಯನ್ನು ಪ್ರದಾನ ಮಾಡುವುದು.

**ವಿವರಣೆ** - ಈ ಖಂಡ ಮತ್ತು ಈ ಅಧಿನಿಯಮದ ಇತರ ಉಪಬಂಧಗಳ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಉದ್ದೇಶಗಳನ್ನು ಈಡೇರಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ, ಭಾರತದಲ್ಲಿರುವ ಅಥವಾ ಇತರ ದೇಶಗಳಲ್ಲಿರುವ ಒಂದು ಸಂಸ್ಥೆ ಅಥವಾ ಒಂದು ಕೇಂದ್ರ.

೩. ನಿಯಮಿಸಲಾದ ರೀತಿಯಲ್ಲಿ ಮತ್ತು ನಿಯಮಿಸಲಾದ ಷರತ್ತುಗಳ ಮೇರೆಗೆ ಗೌರವ ಪದವಿಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು.

೪. ಹಾಸ್ಟೆಲುಗಳ ಮೇಲ್ವಿಚಾರಣೆ ನಡೆಸುವುದು ಮತ್ತು ನಿಯಂತ್ರಿಸುವುದು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡುವಂತೆ ಮಾಡುವುದು ಮತ್ತು ಅವರ ಆರೋಗ್ಯ ಮತ್ತು ಸಾಮಾನ್ಯ ಕ್ಷೇಮಾಭಿವೃದ್ಧಿಗೆ ಉತ್ತೇಜನ ನೀಡಲು ವ್ಯವಸ್ಥೆಗಳನ್ನು ಮಾಡುವುದು.

೫. ವ್ಯಕ್ತಿಗಳಿಗೆ ನೀಡುವ ಯಾವುದೇ ಪದವಿ, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ತಡೆಹಿಡಿಯಬಹುದಾದ ಷರತ್ತುಗಳನ್ನು ನಿಯಮಿಸುವುದು.

೬. ಆಗಿಂದಾಗ್ಗೆ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ವಿಶ್ವವಿದ್ಯಾಲಯವು ಹೊಂದಿರುವಂಥದೇ ಉದ್ದೇಶಗಳು ಮತ್ತು ಗುರಿಗಳ ಉತ್ತೇಜನೆಯನ್ನು ದೃಷ್ಟಿಯಲ್ಲಿರಿಸಿಕೊಂಡಿರುವ ಇತರ ಯಾವುದೇ



ವಿಶ್ವವಿದ್ಯಾಲಯ ಪ್ರಾಧಿಕಾರ ಅಥವಾ ಸಂಘ ಅಥವಾ ಸಾರ್ವಜನಿಕ ಅಥವಾ ಖಾಸಗಿ ನಿಕಾಯದೊಂದಿಗೆ ಸಹಕರಿಸುವುದು.

೭. ಸಂಶೋಧನೆ ಮತ್ತು ಪ್ರಸಾರಾಂಗದ ಸಲುವಾಗಿ ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು, ಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

೮. ಸಂಶೋಧನಾ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವುದು.

೯. ನಿಯಮಿಸಲಾದ ರೀತಿಯಲ್ಲಿ ಪ್ರವಾಸೀ ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನಗಳು, ಪದಕಗಳು ಮತ್ತು ಬಹುಮಾನಗಳೂ ಸೇರಿದಂತೆ ಸಂಶೋಧನಾ ವೇತನಗಳನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವುದು.

೧೦. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲುಗಳನ್ನು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ವಸತಿಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಅಥವಾ ಮಾನ್ಯತೆ ನೀಡುವುದು ಮತ್ತು ಅಂಥ ಯಾವುದೇ ಮಾನ್ಯತೆಗಳನ್ನು ಹಿಂತೆಗೆದುಕೊಳ್ಳುವುದು.

೧೧. ನಿಯಮಿಸಬಹುದಾದಂತೆ ಶುಲ್ಕವನ್ನು ನಿಗದಿಪಡಿಸುವುದು ಮತ್ತು ಅಂಥ ಶುಲ್ಕವನ್ನು ಕೇಳುವುದು ಹಾಗೂ ಸ್ವೀಕರಿಸುವುದು.

೧೨. ವಿಶ್ವವಿದ್ಯಾಲಯದ ಪತ್ರಗಳು ಮತ್ತು ಇತರ ಸ್ವತ್ತುಗಳು ಹಾಗೂ ನಿಧಿಗಳನ್ನು ಧಾರಣ ಮಾಡುವುದು ಮತ್ತು ನಿರ್ವಹಿಸುವುದು.

೧೩. ಸರ್ಕಾರದ ಅನುಮೋದನೆಯೊಂದಿಗೆ ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ಸ್ವತ್ತಿನ ಭದ್ರತೆಯ ಮೇಲೆ ಹಣವನ್ನು ಸಾಲ ಪಡೆಯುವುದು ಮತ್ತು

೧೪. ವಿಶ್ವವಿದ್ಯಾಲಯದ ಗುರಿಗಳನ್ನು ಉತ್ತೇಜಿಸುವ ಉದ್ದೇಶಕ್ಕಾಗಿ, ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಯಾವುದೇ ಸಂಸ್ಥೆಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದು ಮತ್ತು ಅದರ ಎಲ್ಲ ಹಕ್ಕುಗಳು ಮತ್ತು

ದಾಯಿತ್ವಗಳನ್ನು ವಶಕ್ಕೆ ತೆಗೆದುಕೊಳ್ಳುವುದೂ ಸೇರಿದಂತೆ ಇತರ ನಿಕಾಯಗಳು ಅಥವಾ ವ್ಯಕ್ತಿಗಳೊಂದಿಗೆ ಕರಾರು ಮಾಡಿಕೊಳ್ಳುವುದು.

**೬. ವಿಶ್ವವಿದ್ಯಾಲಯಕ್ಕೆ ಪ್ರವೇಶ :**

೧. ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯಕ್ಕೆ ಎಲ್ಲ ವ್ಯಕ್ತಿಗಳಿಗೂ ಮುಕ್ತ ಪ್ರವೇಶವಿರತಕ್ಕುದು.

೨. (೧)ನೇ ಉಪ ಪ್ರಕರಣದಲ್ಲಿರುವುದಾವುದೂ, -

ಎ. ನಿಯಮಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಅಥವಾ ಗುಣಮಟ್ಟವನ್ನು ಹೊಂದಿರದ ಯಾವೊಬ್ಬ ವ್ಯಕ್ತಿಗೆ ಯಾವುದೇ ಅಧ್ಯಯನ ಕ್ರಮಕ್ಕೆ ಪ್ರವೇಶ ನೀಡಲು;

ಬಿ. ಪದವಿ, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಯನ್ನು ನೀಡಲು ಅಗತ್ಯವಿರುವ ಕನಿಷ್ಠ ಮಟ್ಟಕ್ಕಿಂತ ಕಡಿಮೆಯ ಶೈಕ್ಷಣಿಕ ಪ್ರಗತಿಯನ್ನು ತೋರಿಸುವ ಯಾವೊಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದ ಹಾಜರಿಪಟ್ಟಿಯಲ್ಲಿ ಉಳಿಸಿಕೊಳ್ಳಲು; ಅಥವಾ

ಸಿ. ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಅಥವಾ ಇತರ ವಿದ್ಯಾರ್ಥಿಗಳು ಮತ್ತು ಬೋಧಕರ ಹಕ್ಕುಗಳು ಮತ್ತು ವಿಶೇಷಾಧಿಕಾರಿಗಳಿಗೆ ಪ್ರತಿಕೂಲವಾದ ನಡತೆಯುಳ್ಳ ಯಾವೊಬ್ಬ ವ್ಯಕ್ತಿಗೆ ಪ್ರವೇಶ ನೀಡಲು ಅಥವಾ ಯಾವೊಬ್ಬ ವಿದ್ಯಾರ್ಥಿಯನ್ನು ಉಳಿಸಿಕೊಳ್ಳಲು,

- ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕುದಲ್ಲ.

**೭. ಸದಸ್ಯತ್ವಕ್ಕೆ ಅನರ್ಹತೆ :**

೧. ಯಾವೊಬ್ಬ ವ್ಯಕ್ತಿಯು ಅಂಥ ನಾಮನಿರ್ದೇಶನದ ದಿನಾಂಕದಂದು.

ಎ. ಅಸ್ವಸ್ಥಚಿತ್ತದವನಾಗಿದ್ದರೆ, ಕಿವುಡನಾಗಿದ್ದರೆ, ಮೂಗನಾಗಿದ್ದರ ಅಥವಾ ಕುಷ್ಠರೋಗದಿಂದ ಬಳಲುತ್ತಿದ್ದರೆ, ಅಥವಾ

ಬಿ. ದಿವಾಳಿಯೆಂದು ಅಥವಾ ಅನುನ್ಮುಕ್ತ ದಿವಾಳಿಯೆಂದು ನಿರ್ಣೀತನಾದ ಅರ್ಜಿದಾರನಾಗಿದ್ದರೆ; ಅಥವಾ



ಸಿ. ನೈತಿಕ ಅಧಃಪತನವನ್ನು ಒಳಗೊಂಡಿರುವ ಯಾವುದೇ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ,

ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಗಳ ಸದಸ್ಯನೆಂದು ನಾಮನಿರ್ದೇಶಿತನಾಗಲು ಅಥವಾ ಅಂಥ ಪ್ರಾಧಿಕಾರದ ಸದಸ್ಯನಾಗಿರಲು ಅನರ್ಹನಾಗತಕ್ಕುದು.

೨. ಒಬ್ಬ ವ್ಯಕ್ತಿಯು (೧)ನೇ ಉಪಪ್ರಕರಣದ ಅಡಿಯಲ್ಲಿ ಅನರ್ಹನೇ ಇಲ್ಲವೆ ಎಂಬ ಬಗ್ಗೆ ವಿವಾದ ಅಥವಾ ಸಂದೇಹ ಉಂಟಾದ ಸಂದರ್ಭದಲ್ಲಿ, ಅದನ್ನು ಕಾರ್ಯಕಾರಿ ಸಮಿತಿಯು ತೀರ್ಮಾನಿಸತಕ್ಕುದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕುದು.

**೮. ಕೆಲವು ಸಂದರ್ಭಗಳಲ್ಲಿ ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿಗೆ ನಾಮನಿರ್ದೇಶಿತರಾಗಲು ಅನರ್ಹತೆ :**

೧. ೧೯ನೇ ಅಥವಾ ೨೨ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಈ ಮುಂದಿನ ಯಾವುದೇ ಒಂದು ಅಥವಾ ಎರಡೂ ಪ್ರಾಧಿಕಾರಗಳೂ, ಎಂದರೆ

ಎ. ಆಡಳಿತ ಮಂಡಳಿ ಮತ್ತು

ಬಿ. ಕಾರ್ಯಕಾರಿ ಸಮಿತಿ

ಇವುಗಳಲ್ಲಿ ಒಟ್ಟು ಆರು ವರ್ಷಗಳ ಅವಧಿಯವರೆಗೆ ಸದಸ್ಯನಾಗಿ ಪದಧಾರಣ ಮಾಡಿದ ಯಾವೊಬ್ಬ ವ್ಯಕ್ತಿಯು ಸದರಿ ಎರಡು ಪ್ರಾಧಿಕಾರಗಳಲ್ಲಿ ಯಾವುದಕ್ಕೆ ಆಗಲಿ ನಾಮನಿರ್ದೇಶಿತನಾಗಲು ಅರ್ಹನಾಗತಕ್ಕುದಲ್ಲ.

ವಿವರಣೆ :- ಈ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಆರು ವರ್ಷಗಳ ಒಟ್ಟು ಅವಧಿಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ, ಒಂದು ಪ್ರಾಧಿಕಾರದಲ್ಲಿ ಒಬ್ಬ ವ್ಯಕ್ತಿಯ ನಾಮನಿರ್ದೇಶನದ ಮೂಲಕ ಪದಧಾರಣ ಮಾಡಿದ್ದ ಮೂರು ವರ್ಷಗಳ ಅವಧಿ ಮತ್ತು ಇನ್ನೊಂದು ಪ್ರಾಧಿಕಾರದಲ್ಲಿ ಅವನು ನಾಮನಿರ್ದೇಶನದ ಮೂಲಕ ಪದಧಾರಣ ಮಾಡಿದ್ದ ಮೂರು ವರ್ಷಗಳ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕುದು ಮತ್ತು ತದನುಸಾರವಾಗಿ ಅಂಥ

**ವ್ಯಕ್ತಿಯು ಸದರಿ ಎರಡು ಪ್ರಾಧಿಕಾರಗಳಲ್ಲಿ ಯಾವುದೇ ಒಂದಕ್ಕೆ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕುದಲ್ಲ.**

**ಪರಂತು ಈ ಉಪ ಪ್ರಕರಣದ ಉದ್ದೇಶಗಳಿಗಾಗಿ ಆಕಸ್ಮಿಕ ರಿಕ್ತಸ್ಥಾನದಲ್ಲಿರುವ** ಸದರಿ ಎರಡೂ ಪ್ರಾಧಿಕಾರಗಳ ಪೈಕಿ ಯಾವುದೇ ಒಂದರಲ್ಲಿ ಪದಧಾರಣ ಮಾಡಿದ ಒಬ್ಬ ವ್ಯಕ್ತಿಯು, ಆ ಪ್ರಾಧಿಕಾರದಲ್ಲಿ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡಿದ್ದನೆಂದು ಭಾವಿಸತಕ್ಕದು.

ಮತ್ತು ಪರಂತು, ಈ ಉಪ ಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಒಂದು ಪ್ರಾಧಿಕಾರಕ್ಕೆ ನಾಮನಿರ್ದೇಶಿತನಾಗಿದ್ದ ಅಂಥ ವ್ಯಕ್ತಿಯು ಮೊದಲು ನಮೂದಿಸಲಾದ ಪ್ರಾಧಿಕಾರದಲ್ಲಿನ ಸದಸ್ಯತ್ವದ ಆಧಾರದ ಮೇಲೆ ಇನ್ನೊಂದು ಪ್ರಾಧಿಕಾರದ ಸದಸ್ಯನಾದರೆ, ಮೊದಲು ನಮೂದಿಸಲಾದ ಪ್ರಾಧಿಕಾರದಲ್ಲಿ ಪದಧಾರಣ ಮಾಡಿದ್ದ ಅವಧಿಯೊಂದನ್ನೇ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕುದು.

೨. (೧)ನೇ ಉಪ ಪ್ರಕರಣದಲ್ಲಿರುವುದಾವುದೂ, -

ಎ. (ಜಿ) ಬಾಬಿನಲ್ಲಿ ಉಲ್ಲೇಖಿತವಾದ ಆಡಳಿತ ಮಂಡಳಿಯ ಸದಸ್ಯರಲ್ಲದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಒಳಗೊಂಡಿಲ್ಲದ ೧೯ (೧)ನೇ ಪ್ರಕರಣದಲ್ಲಿ ಉಲ್ಲೇಖಿತರಾದ ಸದಸ್ಯರ ಮತ್ತು

(ಬಿ)ನೇ ಪ್ರಕರಣದ (೧)ನೇ ಉಪ ಪ್ರಕರಣದ (ಎ) ಇಂದ (ಡಿ) ವರೆಗಿನ ಖಂಡಗಳಲ್ಲಿ ಉಲ್ಲೇಖಿತರಾದ ಸದಸ್ಯರ

ಸಂಬಂಧದಲ್ಲಿ ಅನ್ವಯಿಸತಕ್ಕುದಲ್ಲ.

೯. ಪರಿಶೀಲನೆ :

೧. ಕುಲಾಧಿಪತಿಯವರು ತಾವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಂದ, ವಿಶ್ವವಿದ್ಯಾಲಯ ಅದರ ಕಟ್ಟಡಗಳು, ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಗ್ರಹಾಲಯಗಳು ಮತ್ತು ಉಪಕರಣಗಳು ಮತ್ತು ವಿಶ್ವವಿದ್ಯಾಲಯದಿಂದ ನಿರ್ವಹಿಸಲಾದ ಅಥವಾ ಮಾನ್ಯತೆ ಪಡೆದ ಯಾವುದೇ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯದಿಂದ ನಡೆಸಲಾದ ಅಥವಾ ಮಾಡಲಾದ ಸಂಶೋಧನೆ, ಬೋಧನೆ ಮತ್ತು ಇತರ ಕೆಲಸದ ಪರಿಶೀಲನೆ ನಡೆಸುವಂತೆ **ಮಾಡಲು ಅಥವಾ ವಿಚಾರಣೆ ಮಾಡುವಂತೆ ಮಾಡಲು ಹಕ್ಕು ಹೊಂದಿರತಕ್ಕುದು ಹಾಗೂ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಂತೆ ಮಾಡತಕ್ಕುದು. ಕುಲಾಧಿಪತಿಯವರು, ಪ್ರತಿಯೊಂದು ಸಂದರ್ಭದಲ್ಲೂ ಅಂಥ ಪರಿಶೀಲನೆ ಅಥವಾ ವಿಚಾರಣೆ** ನಡೆಸುವ ತಮ್ಮ ಆಶಯದ ಬಗ್ಗೆ ವಿಶ್ವವಿದ್ಯಾಲಯಕ್ಕೆ ನೋಟೀಸು ನೀಡತಕ್ಕುದು ಮತ್ತು ವಿಶ್ವವಿದ್ಯಾಲಯವು ಅಲ್ಲಿ ಪ್ರಾತಿನಿಧ್ಯ ಪಡೆಯಲು ಹಕ್ಕುಳ್ಳದ್ದಾಗಿರತಕ್ಕುದು.

೨. ಕುಲಾಧಿಪತಿಯವರು, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಸಂಬಂಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಕಾರ್ಯಕಾರಿ ಸಮಿತಿಗೆ ತಿಳಿಸತಕ್ಕುದು ಮತ್ತು ಅದರ ಮೇಲಣ ಕಾರ್ಯಕಾರಿ ಸಮಿತಿಯ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ತರುವಾಯ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡತಕ್ಕುದು ಮತ್ತು ಅಂಥ ಕ್ರಮವನ್ನು ಕೈಗೊಳ್ಳುವುದಕ್ಕೆ ಕಾಲಮಿತಿಯನ್ನು ನಿಗದಿಪಡಿಸಬಹುದು.

೩. ಕಾರ್ಯಕಾರಿ ಸಮಿತಿಯು ಅಂಥ ಪರಿಶೀಲನೆ ಅಥವಾ ವಿಚಾರಣೆಯ ಫಲಿತಾಂಶಗಳ ಬಗ್ಗೆ ತಾನು ತೆಗೆದುಕೊಳ್ಳಬೇಕೆಂದು ಉದ್ದೇಶಿಸಲಾದ ಅಥವಾ ತೆಗೆದುಕೊಳ್ಳಲಾದ ಕ್ರಮ, ಯಾವುದಾದರೂ ಇದ್ದಲ್ಲಿ, ಆ ಬಗ್ಗೆ ಕುಲಾಧಿಪತಿಯವರಿಗೆ ವರದಿ ಸಲ್ಲಿಸತಕ್ಕುದು. ಅಂಥ ವರದಿಯನ್ನು ಕುಲಾಧಿಪತಿಯವರು ನಿರ್ದೇಶಿಸಬಹುದಾದ ಅಂಥ ಕಾಲದೊಳಗೆ ಸಲ್ಲಿಸತಕ್ಕುದು.

೪. ಕಾರ್ಯಕಾರಿ ಸಮಿತಿಯು (೨)ನೇ ಉಪ ಪ್ರಕರಣದ ಅಡಿಯಲ್ಲಿ ನಿಗದಿಪಡಿಸಬಹುದಾದ ಕಾಲ ಮಿತಿಯೊಳಗೆ ಕುಲಾಧಿಪತಿಯವರಿಗೆ ಸಮಾಧಾನವಾಗುವಂತೆ ಕ್ರಮ ಕೈಗೊಳ್ಳದಿರುವಲ್ಲಿ, ಕುಲಾಧಿಪತಿಯವರು, ಕಾರ್ಯಕಾರಿ ಸಮಿತಿಯಿಂದ ಸಲ್ಲಿಸಲಾದ ವಿವರಣೆ ಅಥವಾ ಮಾಡಿಕೊಳ್ಳಲಾದ ಮನವಿಯನ್ನು ಪರಿಗಣಿಸಿದ ತರುವಾಯ ತಾವು ಉಚಿತವೆಂದು ಭಾವಿಸಬಹುದಾದ ಅಂಥ ನಿರ್ದೇಶನಗಳನ್ನು ಹೊರಡಿಸಬಹುದು ಮತ್ತು ಕಾರ್ಯಕಾರಿ ಸಮಿತಿಯು ಅಂಥ ನಿರ್ದೇಶನಗಳನ್ನು ಪಾಲಿಸದಿದ್ದ ಪಕ್ಷದಲ್ಲಿ, ಕುಲಾಧಿಪತಿಯವರು ಅಂಥ ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ ಯಾವೊಬ್ಬ ವ್ಯಕ್ತಿ ಅಥವಾ

ನಿಕಾಯವನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕುದು ಮತ್ತು ಆ ಬಗೆಗಿನ ವೆಚ್ಚಗಳಿಗಾಗಿ ಅವಶ್ಯಕವಾಗಬಹುದಾದ ಅಂಥ ಆದೇಶಗಳನ್ನು ಹೊರಡಿಸಬಹುದು.

೧೦. **ವಿಶ್ವವಿದ್ಯಾಲಯದ ಅಧಿಕಾರಿಗಳು :** ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಿಗಳನ್ನು ಒಳಗೊಂಡಿರತಕ್ಕುದು, ಎಂದರೆ

೧. ಕುಲಾಧಿಪತಿಯವರು,
೨. ಪ್ರೊ - ಚಾನ್ಸಲರು,
೩. ಕುಲಪತಿಯವರು,
೪. ಫ್ಯಾಕಲ್ಟಿಗಳ ಡೀನ್‌ರವರು,
೫. ಕುಲಸಚಿವರು,
೬. ಹಣಕಾಸು ಅಧಿಕಾರಿ ಮತ್ತು
೭. ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಪರಿನಿಯಮಗಳಿಂದ ಘೋಷಿತರಾಗಬಹುದಾದ ಅಂಥ ಇತರ ವ್ಯಕ್ತಿಗಳು.

೧೧. **ಕುಲಾಧಿಪತಿಯವರು :**

೧. ಕರ್ನಾಟಕ ಮುಖ್ಯಮಂತ್ರಿಯವರು ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕುದು. ಅವರು ತಮ್ಮ ಪದದ ಆಧಾರದಿಂದ ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕುದು ಮತ್ತು ಅವರು ಹಾಜರಾಗಿದ್ದಾಗ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷರಾಗಿರತಕ್ಕುದು ಮತ್ತು ಪದವಿಗಳು, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕುದು.

೨. ಪ್ರಾಧಿಕಾರಗಳಿಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲು ಕುಲಾಧಿಪತಿಯವರಿಂದ ಅಧಿಕಾರವನ್ನು ಪ್ರದತ್ತಗೊಳಿಸಿರುವಲ್ಲಿ ಕುಲಾಧಿಪತಿಯವರು ಅವಶ್ಯಕವಿರುವಷ್ಟರಮಟ್ಟಿಗೆ ಸಾಕಷ್ಟು ಪ್ರಾತಿನಿಧ್ಯ ಪಡೆಯದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ವ್ಯಕ್ತಿಗಳನ್ನು ನಾಮನಿರ್ದೇಶಿಸತಕ್ಕುದು.



೩. ಕುಲಾಧಿಪತಿಯವರು ಸ್ವತಃ ತಾವೇ ಆಗಲಿ ಅಥವಾ ಅರ್ಜಿಯ ಮೇಲೆ ಆಗಲಿ ಯಾವುದೇ ವ್ಯವಹರಣೆಗಳ ಸಂಬಂಧದಲ್ಲಿ ಅಂಥ ವ್ಯವಹರಣೆಗಳ ಸಕ್ರಮತೆ ಅಥವಾ ಯಥಾರ್ಥತೆ ಕೈಗೊಳ್ಳಲಾದ ಯಾವುದೇ ತೀರ್ಮಾನ ಅಥವಾ ಅದರಲ್ಲಿ ಜಾರಿ ಮಾಡಲಾದ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾವೇ ಮನದಟ್ಟು ಮಾಡಿಕೊಳ್ಳಲು ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರದ ದಾಖಲೆಗಳನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಯಾವುದೇ ಸಂದರ್ಭದಲ್ಲಿ ಕುಲಾಧಿಪತಿಯವರಿಗೆ, ಅಂಥ ಯಾವುದೇ ತೀರ್ಮಾನ ಅಥವಾ ಆದೇಶವನ್ನು ಮಾರ್ಪಾಟು ಗೊಳಿಸಬೇಕು, ರದ್ದುಗೊಳಿಸಬೇಕು, ವಿಪರ್ಯಾಸಗೊಳಿಸಬೇಕು ಅಥವಾ ಪುನರ್ ಪರಿಶೀಲನೆಗಾಗಿ ಹಿಂದಕ್ಕೆ ಕಳುಹಿಸಬೇಕೆಂದು ತೋರಿದರೆ ಅವರು ತದನುಸಾರವಾಗಿ ಆದೇಶಗಳನ್ನು ಜಾರಿ ಮಾಡಬಹುದು.

ಪರಂತು, ಈ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ, ಪ್ರತಿಯೊಂದು ಅರ್ಜಿಯನ್ನು, ಅರ್ಜಿಯ ಸಂಬಂಧದಲ್ಲಿನ ವ್ಯವಹರಣೆ, ತೀರ್ಮಾನ ಅಥವಾ ಆದೇಶವನ್ನು ಅರ್ಜಿದಾರನಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಕುಲಾಧಿಪತಿಯವರಿಗೆ ಸಲ್ಲಿಸತಕ್ಕದು;

ಮತ್ತು ಪರಂತು ಯಾವೊಬ್ಬ ವ್ಯಕ್ತಿಗೆ ಪ್ರತಿಕೂಲವಾದ ಯಾವುದೇ ಆದೇಶವನ್ನು ಅಂಥ ವ್ಯಕ್ತಿಗೆ ತನ್ನ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ್ದ ಹೊರತು, ಜಾರಿ ಮಾಡತಕ್ಕುದಲ್ಲ.

೪. ಕುಲಾಧಿಪತಿಯವರು, ಆ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತಗೊಳಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕುದು.

೧೨. **ಪ್ರೊ - ಚಾನ್ಸಲರ್ :** (೧) ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣ ಖಾತೆಯ ಪ್ರಭಾರ ಹೊಂದಿರುವ ಸಚಿವರು, ವಿಶ್ವವಿದ್ಯಾಲಯದ ಪ್ರೊ- ಚಾನ್ಸಲರಾಗಿರತಕ್ಕುದು.

**೧೩. ಕುಲಪತಿಯವರು :**

೧. ಕುಲಪತಿಯವರು ಪ್ರತಿಯೊಂದು ನೇಮಕಾತಿಯನ್ನು ಕುಲಾಧಿಪತಿಯವರು (೨)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿರುವ ಸಮಿತಿಯಿಂದ ಶಿಫಾರಸ್ಸು ಮಾಡಲಾದ ಹೆಸರುಗಳ ಪಟ್ಟಿಯ ಮೂರು ಹೆಸರುಗಳ ಪೈಕಿಯಿಂದ ಮಾಡತಕ್ಕುದು. ಅಂಥ ಪಟ್ಟಿಯು. ಸದರಿ ಸಮಿತಿಯ ಯಾವೊಬ್ಬ ಸದಸ್ಯನ ಹೆಸರನ್ನು ಒಳಗೊಂಡಿರತಕ್ಕುದಲ್ಲ.

೨. (೧)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಸಮಿತಿಯು ಐದು ಮಂದಿ ವ್ಯಕ್ತಿಗಳನ್ನು ಒಳಗೊಂಡಿರತಕ್ಕುದು. ಅವರಲ್ಲಿ ಒಬ್ಬರು ಕುಲಾಧಿಪತಿಯವರಿಂದ ನಾಮನಿರ್ದೇಶಿತರಾಗಿರತಕ್ಕುದು. ಒಬ್ಬರು ಸರ್ಕಾರದಿಂದ ನಾಮನಿರ್ದೇಶಿತರಾಗಿರತಕ್ಕುದು. ಇಬ್ಬರು ಆಡಳಿತ ಮಂಡಳಿಯಿಂದ ನಾಮನಿರ್ದೇಶಿತರಾಗಿರತಕ್ಕುದು ಮತ್ತು ಒಬ್ಬರು ಕಾರ್ಯಕಾರಿ ಸಮಿತಿಯಿಂದ ನಾಮನಿರ್ದೇಶಿತರಾಗಿರತಕ್ಕುದು: ಪರಂತು

ಎ. ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರಗಳ ಸದಸ್ಯನಾಗಿರತಕ್ಕುದಲ್ಲ.

ಬಿ. ಕುಲಾಧಿಪತಿಯವರಿಂದ ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯು, ಸಮಿತಿಯ ಸಭೆಗಳನ್ನು ಸಮಾವೇಶಗೊಳಿಸತಕ್ಕುದು.

೩. ಕುಲಪತಿಯವರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕುದು ಮತ್ತು ಮೂರು ವರ್ಷಗಳ ಹೆಚ್ಚಿನ ಅವಧಿಯವರೆಗೆ ಪುನಃ ನೇಮಕಗೊಳ್ಳಲು ಅರ್ಹರಾಗಿರತಕ್ಕುದು:

ಪರಂತು ಯಾವೊಬ್ಬ ವ್ಯಕ್ತಿಯು ಒಟ್ಟು ಆರು ವರ್ಷಗಳಿಗಿಂತ ಹೆಚ್ಚಾಗಿ ಕುಲಪತಿಯವರ ಹುದ್ದೆಯನ್ನು ಧಾರಣ ಮಾಡತಕ್ಕುದಲ್ಲ. ಮತ್ತು ಪರಂತು

ಎ. ಕುಲಾಧಿಪತಿಯವರು, ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದ ಒಂದು ವರ್ಷದ ಒಟ್ಟು ಅವಧಿಗೆ ಮೀರದ ಅಂಥ ಅವಧಿಯವರೆಗೆ ಪದಾವಧಿಯ ಮುಕ್ತಾಯಗೊಂಡಿರುವ ಕುಲಪತಿಯವರು ತಮ್ಮ ಪದದಲ್ಲಿ ಮುಂದುವರಿಯತಕ್ಕುದೆಂದು ನಿರ್ದೇಶಿಸಬಹುದು.



ಬಿ. ಕುಲಪತಿಯವರು ತಮ್ಮ ಸಹಿಯೊಂದಿಗೆ ಕುಲಾಧಿಪತಿಯವರಿಗೆ ಪತ್ರ ಬರೆದು ಮತ್ತು ಎರಡು ತಿಂಗಳುಗಳ ನೋಟೀಸನ್ನು ನೀಡಿದ ತರುವಾಯ. ತಮ್ಮ ಪದಕ್ಕೆ ರಾಜೀನಾಮೆಯನ್ನು ನೀಡಬಹುದು.

ಅಲ್ಲದೆ ಪರಂತು, ಕುಲಪತಿಯವರಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯು ತಮ್ಮ ಪದಾವಧಿಯಲ್ಲಿ ಅಥವಾ ಅದರ ಯಾವುದೇ ಮುಂದುವರಿಕೆಯಲ್ಲಿ ಅರವತ್ತೈದು ವರ್ಷಗಳ ವಯಸ್ಸು ಪೂರ್ಣಗೊಂಡರೆ, ತಮ್ಮ ಪದದಿಂದ ನಿವೃತ್ತರಾಗತಕ್ಕುದು.

೪. ಕುಲಪತಿಯವರ ಪದದಲ್ಲಿ ಯಾವುದೇ ತಾತ್ಕಾಲಿಕ ರಿಕ್ತತೆಯುಂಟಾದಾಗ ಅಥವಾ ಕುಲಪತಿಯವರು, ಗೈರು ಹಾಜರಿನ ಕಾರಣದಿಂದಾಗಿ ಅಥವಾ ಇತರ ಯಾವುದೇ ಕಾರಣಕ್ಕಾಗಿ ತಮ್ಮ ಪದದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥರಾದಾಗ, ಕಾರ್ಯಕಾರಿ ಸಮಿತಿಯು, ಕುಲಾಧಿಪತಿಯವರ ಅನುಮೋದನೆಯೊಂದಿಗೆ ಕುಲಪತಿಯವರ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವಾದ ವ್ಯವಸ್ಥೆಗಳನ್ನು ಮಾಡುವವರೆಗೆ, ವಿಶ್ವವಿದ್ಯಾಲ ಯದ ಜೇಷ್ಠತಮ ಪ್ರಾಧ್ಯಾಪಕರು, ಕುಲಪತಿಯವರ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕುದು.

೫. ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂಥವುಗಳಾಗಿರತಕ್ಕುದು.

**೧೪. ಕುಲಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳು :**

೧. ಕುಲಪತಿಯವರು ಶೈಕ್ಷಣಿಕ ಮುಖ್ಯಸ್ಥರು ಮತ್ತು ವಿಶ್ವವಿದ್ಯಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕುದು ಮತ್ತು ಕುಲಾಧಿಪತಿಯವರು ಮತ್ತು ಪ್ರೊ-ಚಾನ್ಸಲರು ಗೈರುಹಾಜರಿಯಲ್ಲಿ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸತಕ್ಕದು ಮತ್ತು ಪದವಿಗಳು, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳವ

ರಾಗಿರುವ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕದ್ದು. ಅವರು ಆಡಳಿತ ಮಂಡಳಿ ಕಾರ್ಯಕಾರಿ ಸಮಿತಿ ಹಾಗೂ ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದು ಅವುಗಳ ಅಧ್ಯಕ್ಷರಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಯಾವುದೇ ಸಭೆಯಲ್ಲಿ ಹಾಜರಿದ್ದು ಅಲ್ಲಿ ಭಾಷಣ ಮಾಡಲು ಹಕ್ಕುಳ್ಳವರಾಗಿರತಕ್ಕದ್ದು. ಆದರೆ ಅವರು, ಸಂಬಂಧಪಟ್ಟ ಪ್ರಾಧಿಕಾರದ ಒಬ್ಬ ಸದಸ್ಯರಾಗಿದ್ದ ಹೊರತು ಅಲ್ಲಿ ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

೨. ಈ ಅಧಿನಿಯಮದ ಉಪಬಂಧಗಳು ಮತ್ತು ಪರಿನಿಯಮಗಳನ್ನು ಪಾಲಿಸಲಾಗಿದೆ ಮತ್ತು ಅವುಗಳನ್ನು ನೆರವೇರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು ಮತ್ತು ಉದ್ದೇಶಕ್ಕಾಗಿ ಅವರು ಅವಶ್ಯಕವಾದ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು.

೩. ಕುಲಪತಿಯವರು ಆಡಳಿತ ಮಂಡಳಿ, ಕಾರ್ಯಕಾರಿ ಸಮಿತಿ ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಸಮಾವೇಶಗೊಳಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

೪. (ಎ) ಕುಲಪತಿಯವರು ಯಾವುದೇ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಅಧಿಕಾರ ಹೊಂದಿರತಕ್ಕದ್ದು ಮತ್ತು ತಾವು ಅವಶ್ಯವೆಂದು ಭಾವಿಸುವ ಅಂಥ ಕ್ರಮವನ್ನು ಆದೇಶದ ಮೂಲಕ ಕೈಗೊಳ್ಳತಕ್ಕದ್ದು. ಆದರೆ, ತದನಂತರ ಸಾಧ್ಯವಾದಷ್ಟು ಬೇಗನೆ, ಕೈಗೊಳ್ಳಲಾದ ಕ್ರಮವನ್ನು, ವಿಷಯವನ್ನು ಸಾಮಾನ್ಯವಾಗಿ ವ್ಯವಹರಿಸುತ್ತಿರುವ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ನಿಕಾಯಕ್ಕೆ ವರದಿ ಮಾಡತಕ್ಕದ್ದು.

ಪರಂತು, ಬಾಧಿತನಾಗುವ ಸಂಭವವಿರುವ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಮುಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(ಬಿ) ಈ ಉಪ ಪ್ರಕರಣದ ಅಡಿಯಲ್ಲಿ ಕುಲಪತಿಯವರು ಕೈಗೊಂಡ ಕ್ರಮವು ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯನ್ನು ಬಾಧಿಸಿದಾಗ, ಅಂಥ ವ್ಯಕ್ತಿಯ, ಅಂಥ ಕ್ರಮದ ಬಗ್ಗೆ ನೋಟೀಸನ್ನು ತಾನು ಪಡೆದ



ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಾರ್ಯಕಾರಿ ಸಮಿತಿಗೆ ಒಂದು ಅಪೀಲನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು. ಕುಲಪತಿಯವರು ಅಂಥ ಅಪೀಲಿನ ಮೇಲೆ ಕಾರ್ಯಕಾರಿ ಸಮಿತಿಯು ಹೊರಡಿಸಿದ ಆದೇಶವನ್ನು ಪರಿಣಾಮಕಾರಿಯಾಗಿಸತಕ್ಕದ್ದು.

೫. ಕುಲಪತಿಯವರು, ವಿಶ್ವವಿದ್ಯಾಲಯದ ಬೋಧಕರು ಮತ್ತು ಇತರ ಉದ್ಯೋಗಿಗಳ ನೇಮಕಾತಿ, ಅಮಾನತ್ತುಗೊಳಿಸುವಿಕೆ ಮತ್ತು ವಜಾ ಇವುಗಳಿಗೆ ಸಂಬಂಧಿಸಿದಂತೆ ಕಾರ್ಯಕಾರಿ ಸಮಿತಿಯ ಆದೇಶಗಳನ್ನು ಪರಿಣಾಮಕಾರಿಯಾಗಿಸತಕ್ಕದ್ದು.

೬. ಕುಲಪತಿಯವರು, ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದಲ್ಲಿ ಶಿಸ್ತನ್ನು ಯಥೋಚಿತವಾಗಿ ಪಾಲಿಸಲು ಜವಾಬ್ದಾರರಾಗಿರತಕ್ಕದ್ದು.

೭. ಕುಲಪತಿಯವರು ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅದರ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**೧೫. ಕುಲಸಚಿವರು :**

೧. ಕುಲಸಚಿವರು ಕಾರ್ಯಕಾರಿ ಸಮಿತಿಯು ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಗೆ, ಕಾರ್ಯಕಾರಿ ಸಮಿತಿಯಿಂದ ನೇಮಕಗೊಂಡ ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ವೇತನ ಪಡೆಯುವ ಅಧಿಕಾರಿಯಾಗಿ ರತಕ್ಕದ್ದು ಮತ್ತು ಕುಲಸಚಿವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮೊದಲನೇ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂಥವುಗಳಾಗಿರತಕ್ಕದ್ದು.

೨. ಕುಲಸಚಿವರು ನಿಯಮಿಸಬಹುದಾದ ಇಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

೩. ವಿಶ್ವವಿದ್ಯಾಲಯದಿಂದ ಅಥವಾ ಅದರ ವಿರುದ್ಧವಾಗಿ ಹೂಡಲಾದ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದಪತ್ರಗಳು ಕುಲಸಚಿವರಿಂದ ಸಹಿಯಾಗಿ ಸತ್ಯಾಪಿತಗೊಂಡಿರತಕ್ಕದ್ದು ಮತ್ತು ಅಂಥ ದಾವೆಗಳು ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳು (ಪ್ರೊಸೆಸ್ಸು

ಗಳು) ಕುಲಸಚಿವರಿಗೆ ಜಾರಿಯಾಗತಕ್ಕುದು ಮತ್ತು ಕುಲಸಚಿವರಿಗೆ ಹೊರಡಿಸತಕ್ಕುದು.

೧೬. **ಹಣಕಾಸು ಅಧಿಕಾರಿ :** ಹಣಕಾಸು ಅಧಿಕಾರಿಯು, ಈ ಬಗ್ಗೆ ಸರ್ಕಾರದಿಂದ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಗೆ ಸರ್ಕಾರದಿಂದ ನೇಮಕಗೊಂಡ ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ವೇತನ ಪಡೆಯುವ ಅಧಿಕಾರಿಯಾಗಿರತಕ್ಕುದು ಮತ್ತು ಹಣಕಾಸು ಅಧಿಕಾರಿಯ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು ಮೊದಲನೆ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂಥವುಗಳಾಗಿರತಕ್ಕುದು.

೧೭. **ವಿಶ್ವವಿದ್ಯಾಲಯದ ಪ್ರಾಧಿಕಾರಗಳು :** ವಿಶ್ವವಿದ್ಯಾಲಯ ಪ್ರಾಧಿಕಾರಗಳು. ಆಡಳಿತ ಮಂಡಲಿ, ಕಾರ್ಯಕಾರಿ ಸಮಿತಿ, ಫ್ಯಾಕಲ್ಟಿಗಳು, ಹಣಕಾಸು ಸಮಿತಿ, ಅಧ್ಯಯನ ಮಂಡಲಿಗಳು ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರಬೇಕೆಂದು ಪರಿನಿಯಮಗಳಿಂದ ಘೋಷಿಸಬಹುದಾದ ಅಂಥ ಇತರ ಪ್ರಾಧಿಕಾರಗಳಾಗಿರತಕ್ಕದು.

೧೮. **ಕುಲಪತಿ ಮತ್ತು ಇತರ ಅಧಿಕಾರಿಗಳು ಮುಂತಾದವರು ಲೋಕ ನೌಕರರಾಗಿರಬೇಕು :** ಕುಲಪತಿ, ಕುಲಸಚಿವ, ಹಣಕಾಸು ಅಧಿಕಾರಿ ಮತ್ತು ವಿಶ್ವವಿದ್ಯಾಲಯದ ಇತರ ಉದ್ಯೋಗಿಗಳು, ಈ ಅಧಿನಿಯಮದ ಯಾವುದೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ಮಾಡಲು ಉದ್ದೇಶಿಸಿದಾಗ ಭಾರತ ದಂಡ ಸಂಹಿತೆಯ (೧೮೬೦ರ ಕೇಂದ್ರ ಅಧಿನಿಯಮ XLV) ೨೧ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರಾಗಿರುವರೆಂದು ಭಾವಿಸತಕ್ಕದು.



# ಅಧ್ಯಾಯ ಮೂರು

# ಆಡಳಿತ ಮಂಡಲಿ

೧೯. **ಆಡಳಿತ ಮಂಡಳಿ :**

೧. ಆಡಳಿತ ಮಂಡಲಿಯು ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡಿರತಕ್ಕದು. ಎಂದರೆ :-

ಎ. ಪ್ರೊ - ಚಾನ್ಸಲರ್

ಬಿ. ಕುಲಪತಿ

ಸಿ. ವಿಶ್ವವಿದ್ಯಾಲಯದ ಶಿಕ್ಷಣದ ಪ್ರಭಾರ ಹೊಂದಿರುವ ಸರ್ಕಾರದ ಕಾರ್ಯದರ್ಶಿ.

ಡಿ. ಹಣಕಾಸು ಇಲಾಖೆಯ ಪ್ರಭಾರ ಹೊಂದಿರುವ ಸರ್ಕಾರದ ಕಾರ್ಯದರ್ಶಿ.

ಇ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರ ಹೊಂದಿರುವ ಸರ್ಕಾರದ ಕಾರ್ಯದರ್ಶಿ.

ಎಫ್. ವಿಶ್ವವಿದ್ಯಾಲಯದ ಅನುದಾನ ಆಯೋಗದ ಅಧ್ಯಕ್ಷರು ಅಥವಾ ಅವರ ನಾಮನಿರ್ದೇಶಿತರು.

ಜಿ. ಭಾರತ ಸರ್ಕಾರದ ಪುರಾತತ್ತ್ವಶಾಸ್ತ್ರ ಇಲಾಖೆಯ ಮಹಾ ನಿರ್ದೇಶಕರು.

ಹೆಚ್. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು.

ಐ. ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷರು.

ಜೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು.

ಕೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು

ಎಲ್. ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರು

ಎಂ. ಸರ್ಕಾರದಿಂದ ನಾಮ ನಿರ್ದೇಶಿತರಾದ ಎಂಟು ಮಂದಿ ಸದಸ್ಯರು. ಅವರ ಪೈಕಿ ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರತಕ್ಕದು. ಒಬ್ಬರು

ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಾಗಿರತಕ್ಕದು. ಒಬ್ಬರು ಮಹಿಳೆಯಾಗಿರತಕ್ಕದು. ಒಬ್ಬರು ಧರ್ಮದ ಆಧಾರದ ಮೇಲೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರತಕ್ಕದು ಮತ್ತು ಒಬ್ಬರು ಸರ್ಕಾರದಿಂದ ನಿರ್ದಿಷ್ಟಪಡಿಸಲಾದ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದು.

ಎಸ್. ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರ ಪೈಕಿಯಿಂದ ಅನುಕ್ರಮವಾಗಿ ಚುನಾಯಿತರಾದ ಒಬ್ಬೊಬ್ಬ ಸದಸ್ಯರು.

೨. ಅನ್ಯಥಾ ಉಪಬಂಧಿಸಿರುವುದನ್ನುಳಿದು, ಆಡಳಿತ ಮಂಡಲಿಯ, ನಾಮನಿರ್ದೇಶಿತ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದು ಮತ್ತು ಅಂಥ ಸದಸ್ಯರು ಮೂರು ವರ್ಷಗಳ ಹೆಚ್ಚಿನ ಇನ್ನೊಂದು ಅವಧಿಗೆ ಮೀರದಂತೆ ನಾಮನಿರ್ದೇಶಿತರಾಗಲು ಅರ್ಹರಾಗ ತಕ್ಕದು.

ಪರಂತು ಆಡಳಿತ ಮಂಡಲಿಯಲ್ಲಿ ಆಕಸ್ಮಿಕವಾಗಿ ರಿಕ್ತವಾದ ಸ್ಥಾನಕ್ಕೆ ಒಬ್ಬ ಸದಸ್ಯನು ನಾಮನಿರ್ದೇಶಿತನಾಗಿರುವಲ್ಲಿ, ಅಂಥ ಸದಸ್ಯನು ಧಾರಣ ಮಾಡಿದ ಪದಾವಧಿಯನ್ನು ಈ ಉಪ-ಪ್ರಕರಣದ ಉದ್ದೇಶಕ್ಕಾಗಿ ಮೂರು ವರ್ಷಗಳ ಪೂರ್ಣ ಅವಧಿಯೆಂದು ಅರ್ಥೈಸತಕ್ಕದು.

ಮತ್ತು ಪರಂತು, ಆಡಳಿತ ಮಂಡಲಿಯ ನಾಮನಿರ್ದೇಶಿತ ಸದಸ್ಯನು ತಾತ್ಕಾಲಿಕವಾಗಿ ಯಾವುದೇ ಪದವಿಗಳಿಗೆ ನೇಮಕಗೊಂಡಿದ್ದು, ಆ ಪದದ ಆಧಾರದ ಮೇಲೆ ಅವನು ಆಡಳಿತ ಮಂಡಲಿಯ ಪದನಿಮಿತ್ತ ಸದಸ್ಯನಾಗಲು ಹಕ್ಕುಳ್ಳವನಾಗಿದ್ದಲ್ಲಿ, ಅವನು ತಾನು ಸಹಿ ಮಾಡಿದ ಲಿಖಿತ ನೋಟೀಸಿನ ಮೂಲಕ ಮತ್ತು ಅವನ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡ ಏಳು ದಿನಗಳೊಳಗೆ ಕುಲಪತಿಯವರಿಗೆ ಅದನ್ನು ತಿಳಿಸಿ, ತಾನು ನಾಮನಿರ್ದೇಶನದ ಆಧಾರದ ಮೇಲೆ ಆಡಳಿತ ಮಂಡಲಿಯ ಸದಸ್ಯನಾಗಿ ಮುಂದುವರಿಯುವನೋ ಅಥವಾ ಅಂಥ ಸದಸ್ಯನ ಪದವನ್ನು ರಿಕ್ತಗೊಳಿಸಿ, ತನ್ನ ನೇಮಕಾತಿಯ ಆಧಾರದ ಮೇಲೆ ಪದನಿಮಿತ್ತ ಸದಸ್ಯನಾಗಿರುವನೋ ಎಂಬುದನ್ನು ಆಯ್ಕೆ ಮಾಡತಕ್ಕದು ಮತ್ತು ಈ ಆಯ್ಕೆಯ ನಿರ್ಣಾಯಕವಾಗಿರತಕ್ಕದು. ಅಂಥ ಆಯ್ಕೆ ಮಾಡಲು ತಪ್ಪಿದಲ್ಲಿ, ಅವನು ನಾಮನಿರ್ದೇಶಿತ ಸದಸ್ಯನಾಗಿರುವ ತನ್ನ ಪದವನ್ನು ರಿಕ್ತಗೊಳಿಸಿದ್ದಾನೆಂದು ಭಾವಿಸತಕ್ಕದು.



೩. ಒಬ್ಬ ವ್ಯಕ್ತಿಯು ಆಡಳಿತ ಮಂಡಳಿಯ ಸದಸ್ಯನಾಗಿರುವುದು ನಿಂತು ಹೋದಾಗ, ಅವನು, ಆಡಳಿತ ಮಂಡಳಿಯ ತನ್ನ ಸದಸ್ಯತ್ವದ ಆಧಾರದ ಮೇಲೆ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯನಾಗಿದ್ದಲ್ಲಿ, ಹಾಗೆ ಸದಸ್ಯನಾಗಿರುವುದು ನಿಂತು ಹೋಗತಕ್ಕದು.

೪. ಆಡಳಿತ ಮಂಡಲಿಯ ಸದಸ್ಯನು, ಅನುಮತಿಸಲಾದ ಅಂಥ ದಿನಭತ್ಯೆ ಮತ್ತು ಪ್ರವಾಸ ಭತ್ಯೆಯನ್ನು ಹೊರತುಪಡಿಸಿ, ವಿಶ್ವವಿದ್ಯಾಲಯದಿಂದ ಯಾವುದೇ ಸಂಭಾವನೆಯನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದಲ್ಲ.

ಪರಂತು, ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದಾದರೂ, ಯಾವೊಬ್ಬ ಸದಸ್ಯನನ್ನು, ಅವನು ತಾನು ಧಾರಣ ಮಾಡಿರುವ ಪದದ ಆಧಾರದಿಂದ ತಾನು ಹಕ್ಕುಳ್ಳವನಾಗಿರುವ ವಾಡಿಕೆಯ ಉಪಲಬ್ಧಿಗಳನ್ನು ಪಡೆಯಲು ಅಡ್ಡಿಯುಂಟು ಮಾಡತಕ್ಕದಲ್ಲ

೫. ಆಡಳಿತ ಮಂಡಲಿಯ ಪದನಿಮಿತ್ತ ಸದಸ್ಯನಲ್ಲದ ಒಬ್ಬ ಸದಸ್ಯನು, ತನ್ನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದು. ಅಂಥ ರಾಜೀನಾಮೆಯನ್ನು, ಸದಸ್ಯನು ಬರೆದ ಪತ್ರದ ಮೂಲಕ ಕುಲಾಧಿಪತಿಯವರಿಗೆ ತಿಳಿಸತಕ್ಕದು ಮತ್ತು ಕುಲಾಧಿಪತಿಯವರು ಅದನ್ನು ಅಂಗೀಕರಿಸಿದ ದಿನಾಂಕದಿಂದ ರಾಜೀನಾಮೆಯು ಪರಿಣಾಮಕಾರಿಯಾಗತಕ್ಕದು.

**೨೦. ಆಡಳಿತ ಮಂಡಲಿಯಿಂದ ಸ್ಥೂಲ ಶಿಕ್ಷಣ ನೀತಿಗಳು ಮತ್ತು ಕಾರ್ಯಕ್ರಮಗಳು ಮತ್ತು ವಿಶ್ವವಿದ್ಯಾಲಯದ ಪ್ರಕಾರ್ಯಗಳ ಪುನರವಲೋಕನ :** ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಆಡಳಿತ ಮಂಡಲಿಯು, ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು ಹೊಂದಿರತಕ್ಕದು. ಎಂದರೆ:-

ಎ. ಆಗಿಂದಾಗ್ಗೆ ಶಿಕ್ಷಣ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಮತ್ತು ವಿಶ್ವವಿದ್ಯಾಲಯದ ಕಾರ್ಯ ವೈಖರಿಗಳನ್ನು ಪುನರವಲೋಕಿಸುವುದು ಮತ್ತು ವಿಶ್ವವಿದ್ಯಾಲಯದ ಸುಧಾರಣೆಗಳಿಗೆ ಕ್ರಮಗಳನ್ನು ಸೂಚಿಸುವುದು;

ಬಿ. ಸಲಹೆಗಾಗಿ ಕಳುಹಿಸಬಹುದಾದ ಯಾವುದೇ ವಿಷಯದ ಸಂಬಂಧದಲ್ಲಿ ಕುಲಾಧಿಪತಿಯವರಿಗೆ ಸಲಹೆ ನೀಡುವುದು; ಮತ್ತು

ಸಿ. ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

**೨೧. ಆಡಳಿತ ಮಂಡಳಿಯ ಸಭೆಗಳು :** ೧. ಆಡಳಿತ ಮಂಡಲಿಯು, ಕುಲಾಧಿಪತಿಯವರು ನಿಗದಿಪಡಿಸಬೇಕಾದ ದಿನಾಂಕಗಳಂದು ಪ್ರತಿವರ್ಷವೂ ಕಡೇಪಕ್ಷ ಮೂರು ಬಾರಿ ಸಭೆ ಸೇರತಕ್ಕದು. ಅಂಥ ಸಭೆಗಳಲ್ಲಿ ಒಂದನ್ನು ವಾರ್ಷಿಕ ಸಭೆ ಎಂದು ಕರೆಯತಕ್ಕದು. ಆಡಳಿತ ಮಂಡಲಿಯು ಆಗಿಂದಾಗ್ಗೆ ತಾನು ನಿರ್ಧರಿಸಬಹುದಾದ ಅಂಥ ಇತರ ಕಾಲಗಳಲ್ಲಿಯೂ ಸಹ ಸಭೆ ಸೇರಬಹುದು.

೨. ಆಡಳಿತ ಮಂಡಲಿಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದು ಭಾಗವು ಆಡಳಿತ ಮಂಡಳಿಯ ಸಭೆಗೆ ಅಗತ್ಯವಾದ ಗಣಪೂರ್ತಿಯಾಗಿರತಕ್ಕದು;

ಪರಂತು, ಪದವಿಗಳು, ಡಿಪ್ಲೋಮಾಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಉದ್ದೇಶಕ್ಕಾಗಿ ನಡೆದ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಅಥವಾ ಆಡಳಿತ ಮಂಡಲಿಯ ಸಭೆಗೆ ಅಂಥ ಗಣಪೂರ್ತಿಯ ಅಗತ್ಯವಿರತಕ್ಕದಲ್ಲ.

೩. ಕುಲಾಧಿಪತಿಯವರು ತಾವು ಸೂಕ್ತವೆಂದು ಭಾವಿಸಿದಾಗಲೆಲ್ಲ ಮತ್ತು ಆಡಳಿತ ಮಂಡಲಿಯ ಒಟ್ಟು ಸದಸ್ಯರ ಶೇಕಡಾ ಐವತ್ತರಷ್ಟಕ್ಕಿಂತ ಕಡಿಮೆಯಿಲ್ಲದಷ್ಟು ಸಂಖ್ಯೆಯ ಸದಸ್ಯರ ಸಹಿ ಇರುವ ಲಿಖಿತ ಮನವಿಯ ಮೇಲೆ ಆಡಳಿತ ಮಂಡಲಿಯ ವಿಶೇಷ ಸಭೆಯನ್ನು ನಡೆಸತಕ್ಕದು.



## ಅಧ್ಯಾಯ ನಾಲ್ಕು

## ಕಾರ್ಯಕಾರಿ ಸಮಿತಿ

**೨೨. ಕಾರ್ಯಕಾರಿ ಸಮಿತಿ :**

೧. ಕುಲಾಧಿಪತಿಯವರು, ೧೧ನೇ ಪ್ರಕರಣದ ಅಡಿಯಲ್ಲಿ ಪ್ರಥಮ ಕುಲಪತಿಯವರು ನೇಮಕಗೊಂಡ ತರುವಾಯ ಆದಷ್ಟು ಬೇಗನೆ ಕಾರ್ಯಕಾರಿ ಸಮಿತಿಯನ್ನು ರಚಿಸತಕ್ಕದು.

೨. ಕಾರ್ಯಕಾರಿ ಸಮಿತಿಯು, ಕುಲಪತಿಯವರು ಸೇರಿದಂತೆ ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದು.

ಎ. ಶಿಕ್ಷಣ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ;

ಬಿ. ಹಣಕಾಸು ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ:

ಸಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ;

ಡಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು;

ಇ. ಪುರಾತತ್ತ್ವ ಇಲಾಖೆಯ ನಿರ್ದೇಶಕರು;

ಎಫ್. ಫ್ಯಾಕಲ್ಟಿಗಳ ಡೀನರು;

ಜಿ. ಕನ್ನಡ ಸಾಹಿತ್ಯ, ಇತಿಹಾಸ, ಕರ್ನಾಟಕ ಸಂಸ್ಕೃತಿ, ನಾಟಕ, ವಾಸ್ತುಶಿಲ್ಪ, ಪುರಾತತ್ತ್ವಶಾಸ್ತ್ರ ಶಿಲ್ಪಕಲೆ, ವರ್ಣಚಿತ್ರ, ಜಾನಪದ, ಧರ್ಮ, ತತ್ತ್ವಶಾಸ್ತ್ರ, ಸಾಮಾಜಿಕ ಆಂದೋಲನಗಳು ಮತ್ತು ಕನ್ನಡ ವಿಶ್ವವಿದ್ಯಾಲಯವು ಅಧ್ಯಯನ ಕೈಗೊಂಡ ಅಂಥವೇ ಇತರ ಕ್ಷೇತ್ರಗಳಲ್ಲಿ ಉತ್ಕೃಷ್ಟ ಕೊಡುಗೆ ಸಲ್ಲಿಸಿದವರ ಪೈಕಿ ಸರ್ಕಾರದಿಂದ ನಾಮನಿರ್ದೇಶಿತರಾದ ವ್ಯಕ್ತಿಗಳು, ಎಂಟು ಮಂದಿ. ಅವರ ಪೈಕಿ ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರಬೇಕು. ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರಾಗಿರಬೇಕು, ಒಬ್ಬರು

ಮಹಿಳೆಯಾಗರತಕ್ಕುದು, ಒಬ್ಬರು ಧರ್ಮದ ಆಧಾರದ ಮೇಲೆ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವರಾಗಿರತಕ್ಕದು ಮತ್ತು ಒಬ್ಬರು ಸರ್ಕಾರದಿಂದ ನಿರ್ದಿಷ್ಟಪಡಿಸಲಾದ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕುದು.

೩. ಕುಲಪತಿಯವರು ಕಾರ್ಯಕಾರಿ ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕುದು.

೪. ಯಾವುದೇ ಕಾರಣಕ್ಕಾಗಿ ಶಿಕ್ಷಣ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಹಣಕಾಸು ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರ ದಲ್ಲಿರುವ ಸರ್ಕಾರದ ಕಾರ್ಯದರ್ಶಿಯವರು ಕಾರ್ಯಕಾರಿ ಸಮಿತಿಯ ಸಭೆಗೆ ಹಾಜರಾಗಲು ಅಸಮರ್ಥರಾದ ಸಂದರ್ಭದಲ್ಲಿ ಅವರು ಸರ್ಕಾರದ ಉಪ-ಕಾರ್ಯದರ್ಶಿಯ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ, ತಮ್ಮ ಇಲಾಖೆಯ ಯಾವೊಬ್ಬ ಅಧಿಕಾರಿಯನ್ನು ಸಭೆಯಲ್ಲಿ ಹಾಜರಾಗಲು ಪ್ರತಿನಿಯೋಜಿಸ ಬಹುದು.

೫. ಅನ್ಯಥಾ ಉಪಬಂಧಿಸಿರುವುದನ್ನುಳಿದು, ಕಾರ್ಯಕಾರಿ ಸಮಿತಿಯ ನಾಮನಿರ್ದೇಶಿತ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದು ಮತ್ತು ಅಂಥ ಸದಸ್ಯರು ಮೂರು ವರ್ಷಗಳಿಗೆ ಹೆಚ್ಚಿಲ್ಲದ ಇನ್ನೊಂದು ಅವಧಿಗೆ ನಾಮನಿರ್ದೇಶನಕ್ಕೆ ಅರ್ಹರಾಗಿರತಕ್ಕದು;

ಪರಂತು, ಕಾರ್ಯಕಾರಿ ಸಮಿತಿಯಲ್ಲಿ ಆಕಸ್ಮಿಕವಾಗಿ ರಿಕ್ತವಾದ ಸ್ಥಾನಕ್ಕೆ ಒಬ್ಬ ಸದಸ್ಯನು ನಾಮನಿರ್ದೇಶಿತನಾಗಿರುವಲ್ಲಿ, ಅಂಥ ಸದಸ್ಯನು ಧಾರಣ ಮಾಡಿದ ಪದಾವಧಿಯನ್ನು, ಈ ಉಪಪ್ರಕರಣದ ಉದ್ದೇಶಕ್ಕಾಗಿ ಮೂರು ವರ್ಷಗಳ ಪೂರ್ಣಾವಧಿಯೆಂದು ಅರ್ಥೈಸತಕ್ಕದು:

ಮತ್ತು ಪರಂತು, ಕಾರ್ಯಕಾರಿ ಸಮಿತಿಯ ನಾಮನಿರ್ದೇಶಿತ ಸದಸ್ಯನು ತಾತ್ಕಾಲಿಕವಾಗಿ ಯಾವುದೇ ಪದಗಳಿಗೆ ನೇಮಕಗೊಂಡಿದ್ದು, ಆ ಪದದ ಆಧಾರದ ಮೇಲೆ ಅವನು ಕಾರ್ಯಕಾರಿ ಸಮಿತಿಯ ಪದನಿಮಿತ್ತ ಸದಸ್ಯನಾಗಲು ಹಕ್ಕುಳ್ಳವನಾಗಿದ್ದಲ್ಲಿ, ಅವನು ತಾನು ಸಹಿ ಮಾಡಿದ ಲಿಖಿತ ನೋಟೀಸಿನ ಮೂಲಕ ಮತ್ತು ಅವನ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡ ಏಳು ದಿನಗಳೊಳಗಾಗಿ, ಕುಲಪತಿಯವರಿಗೆ ಅದನ್ನು ತಿಳಿಸಿ ತಾನು ನಾಮ ನಿರ್ದೇಶನದ ಆಧಾರದ ಮೇಲೆ ಕಾರ್ಯಕಾರಿ ಸಮಿತಿಯ ಸದಸ್ಯನಾಗಿ ಮುಂದುವರಿಯುವನೋ ಅಥವಾ ಅಂಥ ಸದಸ್ಯನ ಪದವನ್ನು ರಿಕ್ತಗೊಳಿಸಿ, ತನ್ನ ನೇಮಕಾತಿಯ ಆಧಾರದ ಮೇಲೆ ಪದನಿಮಿತ್ತ ಸದಸ್ಯನಾಗಿರುವನೋ ಎಂಬುದನ್ನು ಆಯ್ಕೆ ಮಾಡಲು ತಪ್ಪಿದಲ್ಲಿ, ಅವನು ನಾಮನಿರ್ದೇಶಿತ ಸದಸ್ಯನಾಗಿರುವ ತನ್ನ ಪದವನ್ನು ರಿಕ್ತಗೊಳಿಸಿದ್ದಾನೆಂದು ಭಾವಿಸತಕ್ಕುದು.



೬. ಒಬ್ಬ ವ್ಯಕ್ತಿಯು ಕಾರ್ಯಕಾರಿ ಸಮಿತಿಯ ಸದಸ್ಯನಾಗಿರುವುದು ನಿಂತು ಹೋದಾಗ, ಅವನು ಕಾರ್ಯಕಾರಿ ಸಮಿತಿಯ ತನ್ನ ಸದಸ್ಯತ್ವದ ಆಧಾರದ ಮೇಲೆ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯನಾಗಿದ್ದಲ್ಲಿ, ಹಾಗೆ ಸದಸ್ಯನಾಗಿರುವುದು ನಿಂತು ಹೋಗತಕ್ಕುದು.

೭. ಕಾರ್ಯಕಾರಿ ಸಮಿತಿಯ ಸದಸ್ಯರು, ನಿಯಮಿಸಬಹುದಾದ ಅಂಥ ದಿನಭತ್ಯೆ ಮತ್ತು ಪ್ರವಾಸ ಭತ್ಯೆಗಳನ್ನು ಹೊರತುಪಡಿಸಿ ವಿಶ್ವವಿದ್ಯಾಲಯದಿಂದ ಯಾವುದೇ ಸಂಭಾವನೆಯನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರತಕ್ಕುದಲ್ಲ;

ಪರಂತು, ಈ ಉಪ-ಪ್ರಕರಣದಲ್ಲಿ ಇರುವುದಾವುದೂ, ಯಾವೊಬ್ಬ ಸದಸ್ಯನನ್ನು, ಅವನು ತಾನು ಧಾರಣ ಮಾಡಿರುವ ಪದದ ಆಧಾರದಿಂದ ತಾನು ಹಕ್ಕುಳ್ಳವನಾಗಿರುವ ವಾಡಿಕೆಯ ಉಪಲಬ್ಧಿಗಳನ್ನು ಪಡೆಯಲು ಅಡ್ಡಿಯುಂಟು ಮಾಡತಕ್ಕುದ್ದಲ್ಲ.

೮. ಪದನಿಮಿತ್ತ ಸದಸ್ಯನಲ್ಲದ ಕಾರ್ಯಕಾರಿ ಸಮಿತಿಯ ಒಬ್ಬ ಸದಸ್ಯನು. ತನ್ನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದು. ಅಂಥ ರಾಜೀನಾಮೆ ಯನ್ನು ಸದಸ್ಯನು ಬರೆದ ಪತ್ರದ ಮೂಲಕ ಕುಲಾಧಿಪತಿಯವರಿಗೆ ತಿಳಿಸತಕ್ಕದು ಮತ್ತು ಕುಲಾಧಿಪತಿಯವರು ಅದನ್ನು ಅಂಗೀಕರಿಸಿದ ದಿನಾಂಕದಿಂದ ರಾಜೀನಾಮೆಯು ಪರಿಣಾಮಕಾರಿಯಾಗ ತಕ್ಕುದು.

**೨೩. ಕಾರ್ಯಕಾರಿ ಸಮಿತಿಯ ಅಧಿಕಾರಗಳು :** ಕಾರ್ಯಕಾರಿ ಸಮಿತಿಯು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದು.

೧. ಪರಿನಿಯಮಗಳನ್ನು ರಚಿಸುವುದು ಮತ್ತು ಮೊದಲನೇ ಪರಿನಿಯಮಗಳನ್ನು ಹೊರತುಪಡಿಸಿ ಪರಿನಿಯಮಗಳನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;

೨. ತಾನು ನಿರ್ಧರಿಸಬಹುದಾದಂತೆ ಅಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾಲಯಗಳು, ಇತರ ಶಿಕ್ಷಣ ಪ್ರಾಧಿಕಾರಿಗಳು ಮತ್ತು ಕಾಲೇಜುಗಳೊಂದಿಗೆ ಸಹಕರಿಸುವುದು;

೩. ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಸಂಶೋಧನೆ ಮತ್ತು ಮುನ್ನಡೆ ಹಾಗೂ ಜ್ಞಾನ ಪ್ರಸಾರಕ್ಕಾಗಿ ವ್ಯವಸ್ಥೆ ಮಾಡುವುದು;

೪. ವಿಶ್ವವಿದ್ಯಾಲಯಗಳಿಗೆ ಅಗತ್ಯವಿರುವ ಉಪನ್ಯಾಸಕರು, ರೀಡರುಗಳು, ಪ್ರಾಧ್ಯಾಪಕರು ಮತ್ತು ಇತರ ಬೋಧಕ ಅಥವಾ ಸಂಶೋಧಕ ಹುದ್ದೆಗಳನ್ನು ಸೃಜಿಸುವುದು;

೫. ಪದವಿಗಳು, ಡಿಪ್ಲೋಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು;

೬. ನಿಯಮಿಸಲಾದ ಷರತ್ತುಗಳ ಮೇರೆಗೆ ಸಂಶೋಧನೆ ನಡೆಸಲಾಗಿದ್ದವರಿಗೆ ಪದವಿಗಳು, ಡಿಪ್ಲೋಮಾಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

೭. ಸಭಾಂಗಣಗಳು ಮತ್ತು ಹಾಸ್ಟೆಲ್‌ಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

೮. ಸಂಶೋಧನಾ ವೇತನಗಳು, ಪ್ರವಾಸೀ ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಬರ್ಸರಿಗಳು, ಪ್ರದರ್ಶನಗಳು, ಪದಕಗಳು ಮತ್ತು ಬಹುಮಾನಗಳನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ಪರಿನಿಯಮಗಳಿಗನುಸಾರವಾಗಿ ನೀಡುವುದು;

೯. ವಾರ್ಷಿಕ ವರದಿ, ವಾರ್ಷಿಕ ಲೆಕ್ಕಪತ್ರಗಳು ಮತ್ತು ಹಣಕಾಸು ಅಂದಾಜುಗಳನ್ನು ಪರಿಗಣಿಸುವುದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಕ್ರಮವನ್ನು ಕೈಗೊಳ್ಳುವುದು;

೧೦. ಪ್ರಸಾರಾಂಗವನ್ನು ಪ್ರಾರಂಭಿಸುವುದು ಮತ್ತು ಅದನ್ನು ನಿರ್ವಹಿಸುವುದು;

೧೧. ಯಾವುದೇ ಸಂಸ್ಥೆಯ ನಿರ್ವಹಣೆಯನ್ನು ವಹಿಸಿಕೊಳ್ಳುವುದಕ್ಕಾಗಿ ಮತ್ತು ಅದರ ಸ್ವತ್ತುಗಳು ಮತ್ತು ದಾಯಿತ್ವಗಳನ್ನು ವಹಿಸಿಕೊಳ್ಳುವುದಕ್ಕಾಗಿ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗದ ಯಾವುದೇ ಇತರ



ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಖಾಸಗಿ ಆಡಳಿತ ಮಂಡಲಿಯೊಂದಿಗೆ ಯಾವುದೇ ಒಪ್ಪಂದ ಮಾಡಿಕೊಳ್ಳುವುದು;

೧೨. ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಚುನಾವಣಾ ಪದ್ಧತಿ ಮತ್ತು ಆಡಳಿತ ಮಂಡಲಿ, ಕಾರ್ಯಕಾರಿ ಸಮಿತಿ ಮತ್ತು ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳ ಸಭೆಗಳ ಕಾರ್ಯ ವಿಧಾನಗಳು ಮತ್ತು ಆಡಳಿತ ಮಂಡಲಿ ಯಲ್ಲದ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಕಾರ್ಯ ಕಲಾಪಗಳಿಗೆ ಅಗತ್ಯವಿರುವ ಸದಸ್ಯರ ಗಣ ಪೂರ್ತಿಯನ್ನು ನಿಯಮಿಸುವ ಪರಿನಿಯಮಗಳನ್ನು ರಚಿಸುವುದು;

೧೩. ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ನಿಧಿಗಳನ್ನು ಧಾರಣ ಮಾಡುವುದು, ನಿಯಂತ್ರಿಸುವುದು ಮತ್ತು ನಿರ್ವಹಿಸುವುದು;

೧೪. ವಿಶ್ವವಿದ್ಯಾಲಯದ ಸಾಮಾನ್ಯ ಮೊಹರಿನ ರೂಪ, ಅಭಿರಕ್ಷೆ ಮತ್ತು ಉಪಯೋಗದ ಬಗ್ಗೆ ನಿರ್ದೇಶಿಸುವುದು;

೧೫. ಈ ಅಧಿನಿಯಮ ಮತ್ತು ಪರಿನಿಯಮಗಳಿಗನುಸಾರವಾಗಿ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ವಿನಿಯಮಿಸುವುದು ಮತ್ತು ನಿರ್ಧರಿಸುವುದು;

೧೬. ನಿರ್ದಿಷ್ಟ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ವಶದಲ್ಲಿರುವ ಎಲ್ಲ ಸ್ವತ್ತುಗಳು ಮತ್ತು ಎಲ್ಲ ನಿಧಿಗಳ ವಹಿವಾಟು ನಡೆಸುವುದು; (೧೮)

ಎ. ವಿಶ್ವವಿದ್ಯಾಲಯದ ಉಪನ್ಯಾಸಕರು, ವಿಶ್ವವಿದ್ಯಾಲಯದ ರೀಡರ್‌ಗಳು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಸಂಶೋಧಕರು ಮತ್ತು ವಿಶ್ವವಿದ್ಯಾಲಯದ ಬೋಧಕರನ್ನು ನೇಮಿಸುವುದು. ಅವರ ಉಪಲಬ್ಧಿಗಳು ಯಾವುವಾದರೂ ಇದ್ದರೆ, ಅವುಗಳನ್ನು ನಿಗದಿಪಡಿಸುವುದು. ಅವರ ಕರ್ತವ್ಯಗಳು ಮತ್ತು ಸೇವಾ ಷರತ್ತುಗಳನ್ನು ನಿರ್ಧರಿಸುವುದು ಮತ್ತು ತಾತ್ಕಾಲಿಕ ರಿಕ್ತಸ್ಥಾನಗಳನ್ನು ಭರ್ತಿ ಮಾಡಲು ಏರ್ಪಾಡು ಮಾಡುವುದು.

ಬಿ. ಆಡಳಿತಾತ್ಮಕ ಮತ್ತು ಇತರ ಅಂಥವೇ ಹುದ್ದೆಗಳ ನೇಮಕಾತಿ ವಿಧಾನವನ್ನು ನಿರ್ದಿಷ್ಟಪಡಿಸಿ ಪರಿನಿಯಮಗಳನ್ನು ರಚಿಸುವುದು ಮತ್ತು ಅವರ

ಉಪಲಬ್ಧಿಗಳು, ಯಾವುದಾದರೂ ಇದ್ದರೆ, ಅವುಗಳನ್ನು ನಿಗದಿಪಡಿಸುವುದು, ಅವರ ಕರ್ತವ್ಯಗಳು ಮತ್ತು ಸೇವಾ ಷರತ್ತುಗಳನ್ನು ನಿರ್ಧರಿಸುವುದು ಮತ್ತು ತಾತ್ಕಾಲಿಕ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಲು ಏರ್ಪಾಡು ಮಾಡುವುದು.

೧೮. ವಿಶ್ವವಿದ್ಯಾಲಯದ ಉಪನ್ಯಾಸಕರು, ವಿಶ್ವವಿದ್ಯಾಲಯದ ರೀಡರ್‌ಗಳು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಸಂಶೋಧಕರು ಮತ್ತು ವಿಶ್ವವಿದ್ಯಾಲಯದ ಬೋಧಕರು ಮತ್ತು ಇತರ ಉದ್ಯೋಗಿಗಳನ್ನು ಅಮಾನತ್ತಿನಲ್ಲಿಡುವುದು ಮತ್ತು ವಜಾ ಮಾಡುವುದು.

೧೯. ವಿಶ್ವವಿದ್ಯಾಲಯದ ಪರವಾಗಿ ಅದಕ್ಕೆ ಮಾಡಿದ ದತ್ತಿಗಳು ಉಯಿಲುಗಳ ದಾನಗಳು, ಅನುದಾನಗಳು ಮತ್ತು ಯಾವುದೇ ಚರ ಮತ್ತು ಸ್ಥಿರ ಸ್ವತ್ತುಗಳ ವರ್ಗಾವಣೆಗಳನ್ನು ಸ್ವೀಕರಿಸುವುದು; ಪರಂತು, ಅಂಥ ಎಲ್ಲಾ ದತ್ತಿಗಳು, ಉಯಿಲುಗಳು, ದಾನಗಳು, ಅನುದಾನಗಳು ಮತ್ತು ವರ್ಗಾವಣೆಗಳನ್ನು ಆಡಳಿತ ಮಂಡಲಿಗೆ ಅದರ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದು.

೨೦. ಎ. ವಿಶ್ವವಿದ್ಯಾಲಯದ ಪರವಾಗಿ ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಸಾರ್ವಜನಿಕರಿಂದ ಅಥವಾ ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದಿಂದ ಸಾಲಗಳನ್ನು ಎತ್ತುವುದು.

ಬಿ. ಸರ್ಕಾರದ ಅನುಮೋದನೆಯೊಂದಿಗೆ ವಿಶ್ವವಿದ್ಯಾಲಯದ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಸ್ವತ್ತಿನ ಭದ್ರತೆಯ ಮೇಲೆ ಹಣವನ್ನು ಸಾಲವಾಗಿ ಪಡೆಯುವುದು.

೨೧. ಸರ್ಕಾರವು ನಿರ್ವಹಿಸದಿರುವ ಹಾಸ್ಟೆಲುಗಳಿಗೆ ಮಾನ್ಯತೆ ನೀಡುವುದು ಮತ್ತು ಪರಿನಿಯಮಗಳು ಮತ್ತು ಅವುಗಳ ಅಡಿಯಲ್ಲಿ ವಿಧಿಸಲಾದ ಷರತ್ತುಗಳಿಗನುಸಾರವಾಗಿಯಲ್ಲದೆ ನಡೆಸಲಾದ ಯಾವುದೇ ಹಾಸ್ಟೆಲುಗಳ ಮಾನ್ಯತೆಯನ್ನು ನಿಲಂಬನಗೊಳಿಸುವುದು ಅಥವಾ ಹಿಂತೆಗೆದು ಕೊಳ್ಳುವುದು;

೨೨. ಹಾಸ್ಟೆಲುಗಳ ಪರಿಶೀಲನೆಗೆ ವ್ಯವಸ್ಥೆ ಮಾಡುವುದು ಮತ್ತು ಆ ಬಗ್ಗೆ ನಿರ್ದೇಶನ ನೀಡುವುದು:



೨೩. ಬೋಧಕರ ವಿದ್ಯಾರ್ಹತೆಯನ್ನು ನಿಯಮಿಸುವುದು:

೨೪. ನಿಯಮಿಸಬಹುದಾದ ಅಂಥ ಶುಲ್ಕಗಳನ್ನು ವಿಧಿಸುವುದು ಮತ್ತು ವಸೂಲು ಮಾಡುವುದು:

೨೫. ಪರಿನಿಯಮಗಳಿಗನುಸಾರವಾಗಿ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶವನ್ನು ವಿನಿಯಮಿಸುವುದು;

೨೬. ಅಧ್ಯಯನ ಮಂಡಳಿಗೆ ಸದಸ್ಯರನ್ನು ನೇಮಿಸುವುದು;

೨೭. ಎ. ಪರಿನಿಯಮಗಳಲ್ಲಿ ವಿಧಿಸಲಾಗಿರುವ ಕಾರ್ಯವಿಧಾನಗಳ ಪ್ರಕಾರ ಮಂಡಲಿಗಳ ಶಿಫಾರಸ್ಸುಗಳನ್ನು ಪರ್ಯಾಲೋಚಿಸಿದ ತರುವಾಯ ತೀರ್ಪುಗಾರರು ಮತ್ತು ಪರೀಕ್ಷಕರನ್ನು ನೇಮಿಸುವುದು:

ಬಿ. ಅವರ ಸಂಭಾವನೆಯನ್ನು ನಿಗದಿಪಡಿಸುವುದು.

೨೮. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಸತಿ ಮತ್ತು ಶಿಸ್ತಿನ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು ಮತ್ತು ಅವರ ಆರೋಗ್ಯ ಮತ್ತು ಹಿತವನ್ನು ಖಚಿತಪಡಿಸಿಕೊಳ್ಳಲು ವ್ಯವಸ್ಥೆಗಳನ್ನು ಮಾಡುವುದು;

೨೯. ಗ್ರಂಥಾಲಯಗಳು, ಸಂಗ್ರಹಾಲಯಗಳು, ಸಂಶೋಧನಾ ಸಂಸ್ಥೆಗಳನ್ನು ಮತ್ತು ವಿಶ್ವವಿದ್ಯಾಲಯದಿಂದ ಸ್ಥಾಪಿಸಲಾದ ಅಥವಾ ನಿರ್ವಹಿಸಲಾದ ಇತರ ಸಂಸ್ಥೆಗಳನ್ನು ಪ್ರಾರಂಭಿಸುವುದು ಮತ್ತು ನಿರ್ವಹಿಸುವುದು;

೩೦. ವಿಶ್ವವಿದ್ಯಾಲಯವು ಪ್ರಾರಂಭಿಸಿದ ಹಾಸ್ಟೆಲುಗಳನ್ನು ನಿರ್ವಹಿಸುವುದು;

೩೧. ವಿಶ್ವವಿದ್ಯಾಲಯದಿಂದ ಪ್ರಾರಂಭಿಸಲಾದ ಯಾವುದೇ ಪ್ರಸಾರಾಂಗವನ್ನು ನಿರ್ವಹಿಸುವುದು;

೩೨. ವಿಶ್ವವಿದ್ಯಾಲಯದೊಳಗೆ ಸಂಶೋಧನೆಗೆ ಉತ್ತೇಜನ ನೀಡುವುದು ಮತ್ತು ಅಂಥ ಸಂಶೋಧನೆಯ ಬಗ್ಗೆ ಆಗಿಂದಾಗ್ಗೆ ವರದಿಗಳನ್ನು ಪಡೆಯುವುದು;

೩೩. ಈ ಅಧಿನಿಯಮದಿಂದ ಅಥವಾ ಪರಿನಿಯಮಗಳಿಂದ ಅವರ ಮೇಲೆ ಪ್ರದತ್ತಗೊಳಿಸಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು;

೩೪. ಕುಲಪತಿಯವರಿಗೆ ಅಥವಾ ತನ್ನದೇ ಸದಸ್ಯರ ಪೈಕಿಯಿಂದ ರಚಿತವಾದ ಒಂದು ಸಮಿತಿಗೆ, ಪರಿನಿಯಮಗಳಿಗನುಸಾರವಾಗಿ ತನ್ನ ಯಾವುದೇ ಅಧಿಕಾರಿಗಳನ್ನು ಪ್ರತ್ಯಾಯೋಜಿಸುವುದು.

**೨೪. ಕಾರ್ಯಕಾರಿ ಸಮಿತಿಯ ಸಭೆ :**

೧. ಕಾರ್ಯಕಾರಿ ಸಮಿತಿಯು ನಿಯಮಿಸಬಹುದಾದ ಅಂಥ ಕಾಲಗಳಲ್ಲಿ ಮತ್ತು ಅಂಥ ಸ್ಥಳಗಳಲ್ಲಿ ಸಭೆ ಸೇರತಕ್ಕದು ಮತ್ತು (೨) ಮತ್ತು (೩)ನೇ ಉಪ-ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಸಭೆಗಳಲ್ಲಿರಬೇಕಾದ ಗಣಪೂರ್ತಿಯೂ ಸೇರಿದಂತೆ ತನ್ನ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದು.

ಪರಂತು, ಕಾರ್ಯಕಾರಿ ಸಮಿತಿಯು ಕಡೇ ಪಕ್ಷ ಪ್ರತಿ ಮೂರು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದು.

೨. ಕುಲಪತಿಯವರು ಅಥವಾ ಅವರ ಗೈರು ಹಾಜರಿಯಲ್ಲಿ, ಹಾಜರಿದ್ದ ಸದಸ್ಯರು ಆಯ್ಕೆ ಮಾಡಿದ ಯಾವೊಬ್ಬ ಸದಸ್ಯನು ಕಾರ್ಯಕಾರಿ ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದು.

೩. ಕಾರ್ಯಕಾರಿ ಸಮಿತಿಯ ಯಾವುದೇ ಸಭೆಯಲ್ಲಿನ ಎಲ್ಲ ಪ್ರಶ್ನೆಗಳನ್ನು ಹಾಜರಿದ್ದು, ಮತ ನೀಡುವ ಸದಸ್ಯರ ಬಹುಮತದ ಮೂಲಕ ನಿರ್ಧರಿಸತಕ್ಕದು ಮತ್ತು ಸಮಾನ ಮತಗಳು ಬಿದ್ದ ಸಂದರ್ಭದಲ್ಲಿ, ಸಂದರ್ಭಾನುಸಾರ, ಕುಲಪತಿಯವರು ಅಥವಾ ಅಧ್ಯಕ್ಷತೆ ವಹಿಸಿರುವ ಸದಸ್ಯರು ಎರಡನೇ ಅಥವಾ ನಿರ್ಣಾಯಕ ಮತವನ್ನು ಚಲಾಯಿಸತಕ್ಕದು.

೪. (ಎ) ಕಾರ್ಯಕಾರಿ ಸಮಿತಿಯು, ಸಮಾಲೋಚನೆಯ ಉದ್ದೇಶಕ್ಕಾಗಿ, ಪರಿಶೀಲನೆಯಲ್ಲಿರುವ ಯಾವುದೇ ವಿಷಯದಲ್ಲಿ ವಿಶೇಷ ಜ್ಞಾನವನ್ನು ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ಯಾವೊಬ್ಬ ವ್ಯಕ್ತಿಯನ್ನು ಯಾವುದೇ ಸಭೆಗೆ ಹಾಜರಾಗುವಂತೆ ಆಹ್ವಾನಿಸಬಹುದು ಅಥವಾ ವ್ಯಕ್ತಿಯು



ಆ ಬಗ್ಗೆ ಮಾತನಾಡಬಹುದು ಮತ್ತು ಸಭೆಯ ವ್ಯವಹರಣೆಗಳಲ್ಲಿ ಅನ್ಯಥಾ ಭಾಗವಹಿಸಬಹುದು. ಆದರೆ ಅವನು ಮತ ನೀಡಲು ಹಕ್ಕುಳ್ಳವನಾಗಿರತಕ್ಕದಲ್ಲ;

ಬಿ. ಹಾಗೆ ಆಹ್ವಾನಿತನಾದ ವ್ಯಕ್ತಿಯು, ಕಾರ್ಯಕಾರಿ ಸಮಿತಿಯ ಸದಸ್ಯನಿಗೆ ಅನುಮತಿಸಬಹುದಾದ ಅಂಥ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದು.

**೨೫. ವಾರ್ಷಿಕ ವರದಿ :** ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಕಾರ್ಯಕಾರಿ ಸಮಿತಿಯು ಸಿದ್ಧಪಡಿಸತಕ್ಕದು ಮತ್ತು ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ದಿನಾಂಕದಂದು ಅಥವಾ ಅದಕ್ಕಿಂತ ಮುಂಚೆ ಆಡಳಿತ ಮಂಡಲಿಗೆ ಸಲ್ಲಿಸತಕ್ಕದು ಮತ್ತು ಆಡಳಿತ ಮಂಡಲಿಯು ತನ್ನ ಮುಂದಿನ ವಾರ್ಷಿಕ ಸಭೆಯಲ್ಲಿ ಅದನ್ನು ಪರಿಗಣಿಸತಕ್ಕದು. ಆಡಳಿತ ಮಂಡಲಿಯು ಆ ಬಗ್ಗೆ ಗೊತ್ತುವಳಿ ಯನ್ನು ಹೊರಡಿಸಬಹುದು ಮತ್ತು ಕಾರ್ಯಕಾರಿ ಸಮಿತಿಗೆ ಅದನ್ನು ತಿಳಿಸತಕ್ಕದು. ಅದು, ಅದಕ್ಕೆ ಅನುಸಾರವಾಗಿ ಕ್ರಮಕ್ಕೆಗೊಳ್ಳತಕ್ಕದು. ಕಾರ್ಯಕಾರಿ ಸಮಿತಿಯು ತಾನು ಕೈಗೊಂಡ ಕ್ರಮದ ಬಗ್ಗೆ ಆಡಳಿತ ಮಂಡಲಿಗೆ ತಿಳಿಸತಕ್ಕದು. ಮಾಹಿತಿಗಾಗಿ, ವರದಿಯ ಒಂದು ಪ್ರತಿಯನ್ನು ಅದರ ಮೇಲೆ ಹೊರಡಿಸಲಾದ ಆಡಳಿತ ಸಮಿತಿಯ ಗೊತ್ತುವಳಿ, ಯಾವುದಾದರೂ ಇದ್ದರೆ, ಅದರ ಒಂದು ಪ್ರತಿಯೊಂದಿಗೆ ಕುಲಾಧಿಪತಿಯವರಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸತಕ್ಕದು.

**೨೬. ವಾರ್ಷಿಕ ಲೆಕ್ಕ ಪತ್ರಗಳು :**

೧. ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಸರ್ಕಾರವು ನಿರ್ದೇಶಿಸಬಹುದಾದ ಅಂಥ ಪರೀಕ್ಷೆ ಮತ್ತು ಲೆಕ್ಕಪರಿಶೋಧನೆಗಾಗಿ ಸಲ್ಲಿಸತಕ್ಕದು.

೨. ವಿಶ್ವವಿದ್ಯಾಲಯವು, ಅಂಥ ಲೆಕ್ಕಪರಿಶೋಧನೆಯಲ್ಲಿ ಎತ್ತಲಾದ ಆಕ್ಷೇಪಗಳನ್ನು ಇತ್ಯರ್ಥಗೊಳಿಸತಕ್ಕದು ಮತ್ತು ಲೆಕ್ಕಪರಿಶೋಧನೆಯ ವರದಿಯ ಮೇಲೆ ಸರ್ಕಾರ ಹೊರಡಿಸಬಹುದಾದ ಅಂಥ ಸೂಚನೆಗಳನ್ನು ಪಾಲಿಸತಕ್ಕದು.

೩. ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿದಾಗ, ಅದನ್ನು ಕಾರ್ಯಕಾರಿ ಸಮಿತಿಯು, ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಪ್ರಕಟಿಸತಕ್ಕುದು ಮತ್ತು ಅದರ ಪ್ರತಿಗಳನ್ನು ಆಡಳಿತ ಮಂಡಲಿಗೆ ಅದರ ಮುಂದಿನ ಸಭೆಯಲ್ಲಿ ಮತ್ತು ಅಂಥ ಪ್ರಕಟಣೆಯ ಮೂರು ತಿಂಗಳೊಳಗಾಗಿ ಕುಲಾಧಿಪತಿಯವರಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸತಕ್ಕುದು.



# ಅಧ್ಯಾಯ ಐದು

## ಫ್ಯಾಕಲ್ಟಿಗಳು, ಅಧ್ಯಯನ ಮಂಡಲಿಗಳು, ಹಣಕಾಸಿನ ಸಮಿತಿ ಮತ್ತು ಇತರ ಪ್ರಾಧಿಕಾರಗಳು

**೨೭. ಫ್ಯಾಕಲ್ಟಿಗಳ ರಚನೆ ಮತ್ತು ಪ್ರಕಾರ್ಯಗಳು :**

೧. ವಿಶ್ವವಿದ್ಯಾಲಯವು, ಭಾಷೆಗಳು, ವಿಜ್ಞಾನಗಳು, ಲಲಿತಕಲೆಗಳು, ಸಮಾಜ ವಿಜ್ಞಾನಗಳು ಮತ್ತು ಪರಿನಿಯಮಗಳಿಂದ ನಿಯಮಿಸಬಹುದಾದ ಅಂಥ ಇತರ ಫ್ಯಾಕಲ್ಟಿಗಳನ್ನು ಹೊಂದಿರತಕ್ಕುದು.

೨. ಫ್ಯಾಕಲ್ಟಿಗಳ ರಚನೆ ಮತ್ತು ಪ್ರಕಾರ್ಯಗಳು ಇತರ ವಿಷಯಗಳಲ್ಲಿ, ನಿಯಮಿಸಬಹುದಾದಂತೆ ಇರತಕ್ಕುದು.

೩. ಪ್ರತಿಯೊಂದು ಫ್ಯಾಕಲ್ಟಿಯು ಮೊದಲನೇ ಪರಿನಿಯಮದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬೋಧಕ ಇಲಾಖೆಗಳನ್ನು ಒಳಗೊಂಡಿರತಕ್ಕುದು.

**೨೮. ಅಧ್ಯಯನ ಮಂಡಲಿಗಳು :**

ಪ್ರತಿಯೊಂದು ಬೋಧನಾ ಇಲಾಖೆಗೆ ಸೇರಿದಂತೆ ಅಧ್ಯಯನ ಮಂಡಲಿಗಳು ಇರತಕ್ಕುದು. ಅಧ್ಯಯನ ಮಂಡಲಿಗಳ ರಚನೆ ಮತ್ತು ಅಧಿಕಾರಗಳು ಪರಿನಿಯಮಗಳಿಂದ ನಿಯಮಿಸಬಹುದಾದಂತೆ ಇರತಕ್ಕುದು.

**೨೯. ಇತರ ಪ್ರಾಧಿಕಾರಗಳ ರಚನೆ :**

ಪರಿನಿಯಮಗಳಿಂದ ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಘೋಷಿಸಬಹುದಾದ ಅಂಥ ಇತರ ನಿಕಾಯಗಳ ರಚನೆಗೆ ನಿಯಮಿಸಬಹುದಾದ ರೀತಿಯಲ್ಲಿ ಉಪಬಂಧ ಕಲ್ಪಿಸತಕ್ಕುದು.

೩೦. **ಹಣಕಾಸು ಸಮಿತಿ :**

೧. ಹಣಕಾಸು ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕುದು. ಎಂದರೆ -

ಎ. ಕುಲಪತಿ,

ಬಿ. ಹಣಕಾಸಿನ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ,

ಸಿ. ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ,

ಡಿ. ಕಾರ್ಯಕಾರಿ ಸಮಿತಿಯು, ತನ್ನ ಸದಸ್ಯರ ಪೈಕಿಯಿಂದ ನಾಮ ನಿರ್ದೇಶಿಸಿದ ಇಬ್ಬರು ಸದಸ್ಯರಲ್ಲಿ ಒಬ್ಬರು ಪ್ರಾಧ್ಯಾಪಕರಾಗಿರತಕ್ಕುದು ಮತ್ತು ಇನ್ನೊಬ್ಬರು ಕಾರ್ಯಕಾರಿ ಸಮಿತಿಗೆ ಕುಲಾಧಿಪತಿಯವರಿಂದ ನಾಮ ನಿರ್ದೇಶಿತರಾದ ವ್ಯಕ್ತಿಯಾಗಿರತಕ್ಕುದು.

೨. ಯಾವುದೇ ಕಾರಣದಿಂದಾಗಿ (೧)ನೇ ಉಪ-ಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಅಧಿಕಾರಿಯು ಹಣಕಾಸು ಸಮಿತಿಯ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥರಾದರೆ ಅವರು ಸರ್ಕಾರದ ಉಪ-ಕಾರ್ಯದರ್ಶಿ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ ತನ್ನ ಇಲಾಖೆಯ ಯಾವೊಬ್ಬ ಅಧಿಕಾರಿಯನ್ನು ಅಂಥ ಸಭೆಯಲ್ಲಿ ಹಾಜರಿರಲು ಪ್ರತಿನಿಯೋಜಿಸ ಬಹುದು. ಅಧಿಕಾರಿ ಅಥವಾ ಪ್ರತಿನಿಯೋಜಿತ ವ್ಯಕ್ತಿಯು ಸಮಿತಿಯ ಚರ್ಚೆಗಳಲ್ಲಿ ಭಾಗವಹಿಸಲು ಮತ್ತು ಮತ ನೀಡಲು ಹಕ್ಕುಳ್ಳವನಾಗಿರತಕ್ಕುದು.

೩. ಕುಲಪತಿಯವರು, ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿತಕ್ಕದು ಮತ್ತು ಹಣಕಾಸು ಅಧಿಕಾರಿಯು ಪದನಿಮಿತ್ತ ಕಾರ್ಯದರ್ಶಿಯಾಗಿರ ತಕ್ಕದು.

೪. ಪದನಿಮಿತ್ತ ಸದಸ್ಯರಲ್ಲದ ಹಣಕಾಸು ಸಮಿತಿಯ ಎಲ್ಲ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕುದು.

೫. ಹಣಕಾಸು ಸಮಿತಿಯ ಲೆಕ್ಕಪತ್ರಗಳನ್ನು ಪರೀಕ್ಷಿಸಲು ಮತ್ತು ವೆಚ್ಚಗಳ ಪ್ರಸ್ತಾವಗಳನ್ನು ಪರಿಶೀಲಿಸಲು ಕಡೇ ಪಕ್ಷ ಮೂರು ತಿಂಗಳಿಗೊಮ್ಮೆ ಯಾದರೂ ಸಭೆ ಸೇರತಕ್ಕುದು;



೬. ಹಣಕಾಸು ಅಧಿಕಾರಿಯು ಸಿದ್ಧಪಡಿಸಿದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಪರ್ಯಾಲೋಚನೆ ಮತ್ತು ಟೀಕೆ-ಟಿಪ್ಪಣಿಗಳಿಗಾಗಿ ಹಣಕಾಸು ಸಮಿತಿಯ ಮುಂದೆ ಮಂಡಿಸತಕ್ಕುದು ಮತ್ತು ತದನಂತರ ಅನುಮೋದನೆಗಾಗಿ ಕಾರ್ಯಕಾರಿ ಸಮಿತಿಗೆ ಸಲ್ಲಿಸತಕ್ಕುದು.

೭. ಹಣಕಾಸು ಸಮಿತಿಯು, ಉತ್ಪಾದನಾಪರ ಕಾರ್ಯಗಳ ಸಂದರ್ಭಗಳಲ್ಲಿ ಸಾಲಗಳಿಂದ ಬರುವ ಉತ್ಪತ್ತಿಗಳನ್ನು ಒಳಗೊಳ್ಳಬಹುದಾದ ವಿಶ್ವವಿದ್ಯಾಲಯದ ಆದಾಯ ಮತ್ತು ಸಂಪನ್ಮೂಲಗಳನ್ನು ಆಧರಿಸಿ ಆ ವರ್ಷದ ಒಟ್ಟು ಆವರ್ತಕ ವೆಚ್ಚ ಮತ್ತು ಒಟ್ಟು ಅನಾವರ್ತಕ ವೆಚ್ಚಗಳಿಗಾಗಿ ಪರಿಮಿತಿಗಳನ್ನು ಶಿಫಾರಸ್ಸು ಮಾಡತಕ್ಕುದು.

೮. ಹಣಕಾಸು ಸಮಿತಿಯು - ಎ. ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿಯನ್ನು ಆಗಿಂದಾಗ್ಗೆ ಪುನರವಲೋಕನ ಮಾಡತಕ್ಕುದು;

ಬಿ. ವಾರ್ಷಿಕ ಹಣಕಾಸು ಅಂದಾಜುಗಳಲ್ಲಿ ಬಂಡವಾಳ ಹೂಡಿಕೆ ಅಥವಾ ವೆಚ್ಚ ಯಾವುದೇ ಹಣದ ಏರ್ಪಾಡು ಮಾಡಿಲ್ಲದ ಅಥವಾ ವಾರ್ಷಿಕ ಹಣಕಾಸು ಅಂದಾಜುಗಳಲ್ಲಿ ಏರ್ಪಾಡು ಮಾಡಿರುವ ಮೊಬಲಗನ್ನು ಮೀರಿದ ವೆಚ್ಚವನ್ನು ಒಳಗೊಳ್ಳುವ ಪ್ರತಿಯೊಂದು ಪ್ರಸ್ತಾವದ ಬಗ್ಗೆ ಕಾರ್ಯಕಾರಿ ಮಂಡಲಿಗೆ ಶಿಫಾರಸ್ಸುಗಳನ್ನು ಮಾಡತಕ್ಕುದು;

ಸಿ. ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ನಿರ್ವಹಿಸುವುದಕ್ಕಾಗಿ ವಿಧಾನಗಳನ್ನು ಮತ್ತು ಪ್ರಕ್ರಿಯೆಗಳನ್ನು ಮತ್ತು ರೀತಿಗಳನ್ನು ನಿಯಮಿಸತಕ್ಕುದು;

ಡಿ. ವಿಶ್ವವಿದ್ಯಾಲಯದ ಹಣಕಾಸಿಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಕಾರ್ಯಕಾರಿ ಸಮಿತಿಗೆ ಶಿಫಾರಸ್ಸುಗಳನ್ನು ಮಾಡತಕ್ಕುದು; ಮತ್ತು

ಇ. ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

೯. ಹಣಕಾಸು ಅಧಿಕಾರಿಯು ಸಿದ್ಧಪಡಿಸಿದ ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳನ್ನು ಪರ್ಯಾಲೋಚನೆ ಮತ್ತು ಟೀಕೆ - ಟಿಪ್ಪಣಿಗಳಿಗಾಗಿ ಹಣಕಾಸು ಸಮಿತಿಯ ಮುಂದೆ ಮಂಡಿಸತಕ್ಕುದು. ನಂತರ ಪರ್ಯಾಲೋಚನೆಗಾಗಿ ಸದರಿ ಅಂದಾಜುಗಳನ್ನು, ಹಣಕಾಸು ಸಮಿತಿಯಿಂದ ಮಾರ್ಪಾಟಾದ ರೂಪದಲ್ಲಿ ಕಾರ್ಯಕಾರಿ ಸಮಿತಿಯ ಮುಂದೆ ಮಂಡಿಸ ತಕ್ಕುದು. ಕಾರ್ಯಕಾರಿ ಸಮಿತಿಯು ಹಣಕಾಸು ಸಮಿತಿಯು ಮಾಡಿದ ಮಾರ್ಪಾಡುಗಳನ್ನು ಅಂಗೀಕರಿಸಬಹುದು.

## ಅಧ್ಯಾಯ ಆರು

## ಪರಿನಿಯಮಗಳು

**೩೧. ಪರಿನಿಯಮಗಳು :** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪರಿನಿಯಮಗಳು, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು. ಎಂದರೆ :-

೧. ಪದವಿಗಳನ್ನು ಪ್ರದಾನ ಮಾಡಲು ಘಟಿಕೋತ್ಸವವನ್ನು ಏರ್ಪಡಿಸುವುದು;

೨. ಗೌರವ ಪದವಿಗಳನ್ನು ಮತ್ತು ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

೩. ವಿಶ್ವವಿದ್ಯಾಲಯದ ಪ್ರಾಧಿಕಾರಗಳ ರಚನೆ, ಅಧಿಕಾರಿಗಳು ಮತ್ತು ಪ್ರಕಾರ್ಯಗಳು;

೪. ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸದಸ್ಯರ ಪೈಕಿಯಿಂದ ರಿಕ್ತಸ್ಥಾನಗಳನ್ನು ಭರ್ತಿ ಮಾಡುವ ರೀತಿ;

೫. ಪ್ರಾಧಿಕಾರಗಳ ಮತ್ತು ಅವುಗಳ ಸಮಿತಿಗಳ ಸದಸ್ಯರಿಗೆ ಸಂದಾಯ ಮಾಡಬೇಕಾಗಿರುವ ಭತ್ಯೆಗಳು:

೬. ಪ್ರಾಧಿಕಾರಗಳ ಆದೇಶಗಳ ಅಥವಾ ತೀರ್ಮಾನಗಳ ಪ್ರಮಾಣೀಕರಣ;

೭. ಪ್ರಾಧಿಕಾರಗಳ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ, ಅಂಥ ಸಭೆಗಳಲ್ಲಿ ಇರಬೇಕಾದ ಗಣಪೂರ್ತಿಯನ್ನೂ ಒಳಗೊಂಡಂತೆ, ಅಂಥ ಸಭೆಗಳ ಕಾರ್ಯವಿಧಾನ;

೮. ವಿಶ್ವವಿದ್ಯಾಲಯದ ಸಂಶೋಧನಾ ಇಲಾಖೆಗಳ ರಚನೆ;

೯. ಕುಲಾಧಿಪತಿಯವರು ಮತ್ತು ಪ್ರೊ - ಚಾನ್ಸಲರಲ್ಲದ ವಿಶ್ವವಿದ್ಯಾಲಯದ ಅಧಿಕಾರಿಗಳ ಪದಾವಧಿ ಮತ್ತು ನೇಮಕಾತಿ ವಿಧಾನಗಳು ಮತ್ತು ಸೇವಾ ಪರತ್ತುಗಳು;



೧೦. ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಬೋಧಕರು ಮತ್ತು ಇತರ ವ್ಯಕ್ತಿಗಳ ವಿದ್ಯಾರ್ಹತೆಗಳು;

೧೧. ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಬೋಧಕರು ಮತ್ತು ಇತರ ವ್ಯಕ್ತಿಗಳ ವರ್ಗೀಕರಣ, ನೇಮಕಾತಿ ವಿಧಾನ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ನಿರ್ಧಾರ;

೧೨. ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ಪ್ರಯೋಜನಕ್ಕಾಗಿ ನಿವೃತ್ತಿ ವೇತನ, ಉಪದಾನ, ವಿಮೆ ಅಥವಾ ಭವಿಷ್ಯ ನಿಧಿಗಳ ಪ್ರಾರಂಭ;

೧೩. ಸಂಶೋದನಾ ವೇತನಗಳು, ಪ್ರವಾಸೀ ಸಂಶೋಧನಾ ವೇತನಗಳು, ವಿದ್ಯಾರ್ಥಿವೇತನ, ಶಿಷ್ಯ ವೇತನ, ಬರ್ಸರಿಗಳು, ಪ್ರದರ್ಶನಗಳು, ಪದಕಗಳು ಮತ್ತು ಬಹುಮಾನಗಳನ್ನು ನೀಡುವುದನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವ ಬಗ್ಗೆ ಷರತ್ತುಗಳು;

೧೪. ವಸತಿ ನಿಲಯಗಳು ಮತ್ತು ಹಾಸ್ಟೆಲುಗಳ ಸ್ಥಾಪನೆ ಮತ್ತು ನಿರ್ವಹಣೆ;

೧೫. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಸತಿ ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುವ ಹಾಸ್ಟೆಲುಗಳು ಮತ್ತು ವಸತಿ ನಿಲಯಗಳ ಷರತ್ತುಗಳು ಮತ್ತು ಅಂಥ ವಸತಿಗೆ ಶುಲ್ಕಗಳು ಮತ್ತು ಇತರೆ ವೆಚ್ಚಗಳನ್ನು ವಿಧಿಸುವುದು;

೧೬. ವಿಶ್ವವಿದ್ಯಾಲಯದ ಅಧಿಕಾರಿಗಳ ಮೇಲೆ ಪ್ರಾಧಿಕಾರಗಳಲ್ಲಿ, ನಿಹಿತವಾಗಿರುವ ಅಧಿಕಾರಗಳ ಪ್ರತ್ಯಾಯೋಜನೆ;

೧೭. ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

೧೮. ವಿಶ್ವವಿದ್ಯಾಲಯವು ನಿರ್ವಹಿಸಿದ ಹಾಸ್ಟೆಲುಗಳಿಗೆ ಮಾನ್ಯತೆ ನೀಡಲು ಷರತ್ತುಗಳು;

೧೯. ಪರೀಕ್ಷಾ ನಿಕಾಯಗಳು ಮತ್ತು ಪರೀಕ್ಷಕರ ನೇಮಕಾತಿ ಷರತ್ತುಗಳು ಮತ್ತು ವಿಧಾನ ಹಾಗೂ ಅವರ ಕರ್ತವ್ಯಗಳು;

೨೦. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮಧ್ಯೆ ಶಿಸ್ತು ನಿರ್ವಹಣೆಯ ಷರತ್ತುಗಳು;

೨೧. ಸಂಶೋಧನೆಗೆ ವಿಧಿಸಬೇಕಾದ ಶುಲ್ಕಗಳು; ಮತ್ತು

೨೨. ಪರಿನಿಯಮಗಳಿಂದ ನಿಯಮಿಸುವ ಅಗತ್ಯವಿರುವ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

**೩.೨. ಪರಿನಿಯಮಗಳ ರಚನಾ ವಿಧಾನ :**

೧. ಮೊದಲನೇ ಪರಿನಿಯಮಗಳು ಅನುಸೂಚಿಯಲ್ಲಿ ನಿರೂಪಿಸಲಾಗಿರುವಂತೆ ಇರತಕ್ಕುದು.

೨. ಕಾರ್ಯಕಾರಿ ಸಮಿತಿಯು, ಆಗಿಂದಾಗ್ಗೆ ಮೊದಲನೇ ಪರಿನಿಯಮಗಳನ್ನು ಹೊರತುಪಡಿಸಿ, ಈ ಪ್ರಕರಣದಲ್ಲಿ ಇನ್ನು ಮುಂದೆ ಉಪಬಂಧಿಸಲಾದ ರೀತಿಯಲ್ಲಿ ಪರಿನಿಯಮಗಳನ್ನು ರಚಿಸಬಹುದು ಮತ್ತು ಪರಿನಿಯಮಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು:

೩. ಕಾರ್ಯಕಾರಿ ಸಮಿತಿಯ ಯಾವೊಬ್ಬ ಸದಸ್ಯನು ಪರಿನಿಯಮದ ಕರಡಿನ ರಚನೆಯ ಬಗ್ಗೆ ಕಾರ್ಯಕಾರಿ ಸಮಿತಿಗೆ ಪ್ರಸ್ತಾವ ಮಾಡಬಹುದು ಮತ್ತು ಕಾರ್ಯಕಾರಿ ಸಮಿತಿಯು ಕರಡನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು:

೪. ಕಾರ್ಯಕಾರಿ ಸಮಿತಿಯು ಅಂಗೀಕರಿಸಿದ ಪರಿನಿಯಮವನ್ನು ಕುಲಾಧಿಪತಿಯವರಿಗೆ ಸಲ್ಲಿಸತಕ್ಕುದು. ಅವರು ಅದಕ್ಕೆ ಒಪ್ಪಿಗೆ ನೀಡಬಹುದು. ಇಲ್ಲವೆ ಒಪ್ಪಿಗೆಯನ್ನು ತಡೆಹಿಡಿಯಬಹುದು ಕಾರ್ಯಕಾರಿ ಸಮಿತಿಯಿಂದ ಅಂಗೀಕೃತವಾದದ ಪರಿನಿಯಮವು ಅದಕ್ಕೆ ಕುಲಾಧಿಪತಿಯವರು ಒಪ್ಪಿಗೆ ನೀಡುವವರೆಗೆ ಕಾನೂನು ಮಾನ್ಯತೆಯನ್ನು ಹೊಂದಿರತಕ್ಕುದಲ್ಲ.



## ಅಧ್ಯಾಯ ಏಳು

# ವಿಶ್ವವಿದ್ಯಾಲಯದ ನಿಧಿಗಳು

**೩.೩. ಸಾಮಾನ್ಯ ನಿಧಿಗಳು :** ವಿಶ್ವವಿದ್ಯಾಲಯವು ಒಂದು ಸಾಮಾನ್ಯ ನಿಧಿಯನ್ನು ಹೊಂದಿರತಕ್ಕುದು, ಅದಕ್ಕೆ -

ಎ. ಶುಲ್ಕಗಳು, ಅನುದಾನಗಳು, ದಾನಗಳು ಮತ್ತು ಕೊಡುಗೆಗಳು, ಯಾವುವಾದರೂ ಇದ್ದರೆ, ಅವುಗಳಿಂದ ಬರುವ ವರಮಾನ:

ಬಿ. ಕೇಂದ್ರ ಸರ್ಕಾರದಿಂದ ಮಾಡಲಾದ ಯಾವುದೇ ವಂತಿಗೆ ಅಥವಾ ಅನುದಾನಗಳು. ಯಾವುವಾದರೂ ಇದ್ದರೆ, ಅವು ಅಥವಾ ಯಾವುದೇ ರಾಜ್ಯ ಸರ್ಕಾರ. ವಿಶ್ವವಿದ್ಯಾಲಯ ಅನುದಾನದ ಆಯೋಗ ಅಥವಾ ಅಂಥದೇ ಪ್ರಾಧಿಕಾರ. ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ನಿಗಮದಿಂದ ಮಾಡಲಾದ ಯಾವುದೇ ವಂತಿಗೆ ಅಥವಾ ಅನುದಾನ: ಮತ್ತು

ಸಿ. ದತ್ತಿಗಳು ಮತ್ತು ಇತರ ಸ್ವೀಕೃತಿಗಳು.

- ಜಮೆಯಾಗತಕ್ಕುದು.

## ಅಧ್ಯಾಯ ಎಂಟು

## ಸೇವಾ ಷರತ್ತುಗಳು

**೩೪. ನಿವೃತ್ತಿ ವೇತನ, ಉಪದಾನ ಮೊದಲಾದವುಗಳು**

೧. ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ಪ್ರಯೋಜನಕ್ಕಾಗಿ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ತಾನು ಉಚಿತವೆಂದು ಭಾವಿಸುವ ಅಂಥ ನಿವೃತ್ತಿ ವೇತನ, ಉಪದಾನ, ವಿಮೆ ಮತ್ತು ಭವಿಷ್ಯ ನಿಧಿಗಳನ್ನು ಪ್ರಾರಂಭಿಸತಕ್ಕುದು.

೨. ವಿಶ್ವವಿದ್ಯಾಲಯವು, (೧)ನೇ ಉಪ-ಪ್ರಕರಣದ ಅಡಿಯಲ್ಲಿ ಭವಿಷ್ಯ ನಿಧಿಯನ್ನು ಪ್ರಾರಂಭಿಸಿರುವಲ್ಲಿ, ಸರ್ಕಾರವು, ಭವಿಷ್ಯ ನಿಧಿಗಳ ಅಧಿನಿಯಮ, ೧೯೨೫ (೧೯೨೫ರ ಕೇಂದ್ರಾದಿ ನಿಯಮ XIX)ರ ಉಪಬಂಧಗಳು. ವಿಶ್ವವಿದ್ಯಾಲಯವು ಒಂದು ಸ್ಥಳೀಯ ಪ್ರಾಧಿಕಾರವೆಂಬಂತೆ ಮತ್ತು ನಿಧಿಯು ಸರ್ಕಾರಿ ಭವಿಷ್ಯ ನಿಧಿಯೆಂಬಂತೆ ಅಂಥ ನಿಧಿಗೆ ಅನ್ವಯವಾಗತಕ್ಕುದೆಂದು ಘೋಷಿಸಬಹುದು.

೩. ವಿಶ್ವವಿದ್ಯಾಲಯವು, ಹಣಕಾಸು ಸಮಿತಿಯೊಂದಿಗೆ ಸಮಾಲೋಚಿಸಿ ತಾನು ನಿರ್ಧರಿಸಬಹುದಾದಂಥ ರೀತಿಯಲ್ಲಿ, ಭವಿಷ್ಯ ನಿಧಿಯ ಮೊಬಲಗನ್ನು ತೊಡಗಿಸಬಹುದು.

**೩೫. ಸೇವಾ ಷರತ್ತುಗಳು :** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದಲ್ಲಿ ನಿಯೋಜಿತರಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ನೇಮಕಾತಿ, ಆಯ್ಕೆಯ ಕಾರ್ಯವಿಧಾನ, ವೇತನ ಮತ್ತು



ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕುದು.

**ವಿವರಣೆ :**

ಈ ಪ್ರಕರಣದ ಉದ್ದೇಶಗಳಿಗಾಗಿ, 'ಅಧಿಕಾರಿಗಳು' ಎಂಬ ಪದವು ಕುಲಾಧಿಪತಿ ಮತ್ತು ಪ್ರೊ - ಚಾನ್ಸಲರನ್ನು ಒಳಗೊಳ್ಳತಕ್ಕುದಲ್ಲ.

**೩೬. ಇಲಾಖಾ ಮುಖ್ಯಸ್ಥರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು:**

೧. ವಿಶ್ವವಿದ್ಯಾಲಯದ ಪ್ರತಿಯೊಂದು ಇಲಾಖೆಯು, ಪ್ರಾಧ್ಯಾಪಕರಾಗಿರುವ ಒಬ್ಬರನ್ನು ಮುಖ್ಯಸ್ಥರನ್ನಾಗಿ ಹೊಂದಿರತಕ್ಕುದು ಮತ್ತು ಅವರ ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಮತ್ತು ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕುದು;

ಪರಂತು, ಯಾವುದೇ ಇಲಾಖೆಯಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿ ಪ್ರಾಧ್ಯಾಪಕರಿದ್ದರೆ, ಇಲಾಖಾ ಮುಖ್ಯಸ್ಥರನ್ನು ನಿಯಮಿಸಬಹುದಾದ ರೀತಿಯಲ್ಲಿ ನೇಮಕ ಮಾಡತಕ್ಕುದು;

ಮತ್ತು ಪರಂತು, ಇಲಾಖೆಯಲ್ಲಿ ಪ್ರಾಧ್ಯಾಪಕರು ಇಲ್ಲದಿದ್ದಲ್ಲಿ, ಸಹ ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರನ್ನು, ನಿಯಮಿಸಲಾದ ರೀತಿಯಲ್ಲಿ ಇಲಾಖಾ ಮುಖ್ಯಸ್ಥರನ್ನಾಗಿ ನೇಮಕ ಮಾಡಬಹುದು.

೨. ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರಿಗೆ ಇಲಾಖಾ ಮುಖ್ಯಸ್ಥರ ಹುದ್ದೆಯನ್ನು ನಿರಾಕರಿಸುವ ಅವಕಾಶವಿರತಕ್ಕುದು.

೩. ಇಲಾಖಾ ಮುಖ್ಯಸ್ಥನಾಗಿ ನೇಮಕಗೊಂಡ ವ್ಯಕ್ತಿಯು, ಮೂರು ವರ್ಷಗಳ ಅವಧಿಯವರೆಗೆ ಇಲಾಖಾ ಮುಖ್ಯಸ್ಥನಾಗಿ ಪದಧಾರಣ ಮಾಡತಕ್ಕುದು ಮತ್ತು ಮರು ನೇಮಕಾತಿಗೆ ಅರ್ಹರಾಗಿರತಕ್ಕುದು.

೪. ಇಲಾಖಾ ಮುಖ್ಯಸ್ಥನು ತನ್ನ ಪದಾವಧಿಯ ಯಾವುದೇ ಕಾಲದಲ್ಲಿ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

೫. ಇಲಾಖಾ ಮುಖ್ಯಸ್ಥನು ನಿಯಮಿಸಬಹುದಾದ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು.

**೩೬. ಫ್ಯಾಕಲ್ಟಿಗಳ ಡೀನರ ಸೇವಾ ನಿಬಂಧನೆಗಳು ಮತ್ತು ಪರತ್ತುಗಳು:** ಫ್ಯಾಕಲ್ಟಿಯ ಪ್ರತಿಯೊಬ್ಬ ಡೀನರು ಮೊದಲನೇ ಪರಿನಿಯಮಗಳಲ್ಲಿ ನಿರ್ದಿಷ್ಟ ಪಡಿಸಲಾದ ಅಂಥ ರೀತಿಯಲ್ಲಿ ನೇಮಿತರಾಗತಕ್ಕುದು ಮತ್ತು ಅವರು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸ ತಕ್ಕುದು.



# ಅಧ್ಯಾಯ ಒಂಬತ್ತು

## ಸಂಕೀರ್ಣ

೩೭. ಆಕಸ್ಮಿಕ ರಿಕ್ತಸ್ಥಾನಗಳನ್ನು ಭರ್ತಿ ಮಾಡುವುದು : ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ಇತರ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಸದಸ್ಯರ ಪೈಕಿ ಉಂಟಾಗುವ ಎಲ್ಲ ಆಕಸ್ಮಿಕ ರಿಕ್ತಸ್ಥಾನಗಳನ್ನು, ಆ ಸದಸ್ಯನನ್ನು ನಾಮನಿರ್ದೇಶಿಸಿದ ವ್ಯಕ್ತಿ ಅಥವಾ ನಿಕಾಯವು, ಅನುಕೂಲವಾದಷ್ಟು ಬೇಗನೆ ಭರ್ತಿ ಮಾಡತಕ್ಕುದು ಮತ್ತು ಆಕಸ್ಮಿಕ ರಿಕ್ತಸ್ಥಾನದಲ್ಲಿ ನಾಮನಿರ್ದೇಶಿತನಾದ ವ್ಯಕ್ತಿಯು, ಯಾವ ವ್ಯಕ್ತಿಯ ಸ್ಥಾನದಲ್ಲಿ ಭರ್ತಿಗೊಂಡಿರುವನೋ ಆ ವ್ಯಕ್ತಿಯು ಸದಸ್ಯನಾಗಿರುತ್ತಿದ್ದ ಉಳಿದ ಅವಧಿಯವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರತಕ್ಕುದು.

ಪರಂತು, ಅಂಥ ಯಾವುದೇ ಆಕಸ್ಮಿಕ ರಿಕ್ತಸ್ಥಾನವು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚಿನ ಆರು ತಿಂಗಳೊಳಗಾಗಿ ಉಂಟಾದರೆ, ಅಂಥ ಯಾವುದೇ ರಿಕ್ತಸ್ಥಾನವನ್ನು ಭರ್ತಿ ಮಾಡತಕ್ಕುದಲ್ಲ.

೩೮. **ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ವ್ಯವಹರಣೆಗಳು ರಿಕ್ತಸ್ಥಾನಗಳು ಇರುವುದರಿಂದಾಗಿ ಅಮಾನ್ಯವಾಗತಕ್ಕುದಲ್ಲ :** ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು, ಯಾವುದೇ ರಿಕ್ತಸ್ಥಾನ ಇದೆ ಎಂಬ ಅಥವಾ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನ ನೇಮಕಾತಿಯಲ್ಲಿನ ಯಾವುದೇ ದೋಷ ಅಥವಾ ಅಕ್ರಮತೆಯ ಅಥವಾ ಪ್ರಕರಣದ ಗುಣಗಳಿಗೆ ಬಾಧಕವಾಗದ, ಅಂಥ ಕೃತ್ಯ

ಅಥವಾ ವ್ಯವಹರಣೆಯಲ್ಲಿನ ಯಾವುದೇ ದೋಷ ಅಥವಾ ಅಕ್ರಮತೆಯ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕುದಲ್ಲ.

**೪೦. ವಿಶ್ವವಿದ್ಯಾಲಯದ ಸದಸ್ಯದಿಂದ ತೆಗೆದು ಹಾಕುವುದು :**

೧. ಕಾರ್ಯಕಾರಿ ಸಮಿತಿಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯತ್ವದಿಂದ ಯಾವೊಬ್ಬ ವ್ಯಕ್ತಿಯನ್ನು, ಅಂಥ ವ್ಯಕ್ತಿಯು, ಕಾರ್ಯಕಾರಿ ಸಮಿತಿಯ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಸಿದ್ಧದೋಷಿ ಯಾಗಿದ್ದರೆ ಅಥವಾ ಗುರುತರ ದುರ್ವರ್ತನೆಯ ದೋಷಿಯಾಗಿದ್ದರೆ, ಕಾರ್ಯಕಾರಿ ಸಮಿತಿಯು ಒಟ್ಟು ಸದಸ್ಯರ ಬಹುಮತದಿಂದ ಮತ್ತು ಸಭೆಯಲ್ಲಿ ಹಾಜರಿದ್ದು ಮತ ನೀಡುವ ಕಾರ್ಯಕಾರಿ ಸಮಿತಿಯ ಮೂರನೇ ಎರಡರಷ್ಟು ಸಂಖ್ಯೆಯ ಸದಸ್ಯರಿಗಿಂತ ಕಡಿಮೆಯಿಲ್ಲದ ಬಹುಮತದಿಂದ ಒಂದು ಗೊತ್ತುವಳಿಯನ್ನು ಅಂಗೀಕರಿಸಿ ಆ ಬಗ್ಗೆ ಲಿಖಿತದಲ್ಲಿ ಆದೇಶವನ್ನು ಹೊರಡಿಸುವ ಮೂಲಕ ತೆಗೆದು ಹಾಕಬಹುದು ಮತ್ತು ಅದೇ ಕಾರಣಕ್ಕಾಗಿ ಕಾರ್ಯಕಾರಿ ಸಮಿತಿಯು ವಿಶ್ವವಿದ್ಯಾಲಯವು ಆ ವ್ಯಕ್ತಿಗೆ ಪ್ರದಾನ ಮಾಡಿರುವ ಅಥವಾ ನೀಡಿರುವ ಯಾವುದೇ ಪದವಿ ಅಥವಾ ಡಿಪ್ಲೊಮಾವನ್ನು ಹಿಂತೆಗೆದುಕೊಳ್ಳಬಹುದು.

೨. ಕಾರ್ಯಕಾರಿ ಸಮಿತಿಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯತ್ವದಿಂದ ಯಾವೊಬ್ಬ ವ್ಯಕ್ತಿಯನ್ನು, ಅವನು ಅಸ್ವಸ್ಥಚಿತ್ತದವನಾದರೆ, ಕಿವುಡನಾದರೆ, ಮೂಕನಾದರೆ ಅಥವಾ ಕುಷ್ಠರೋಗದಿಂದ ನರಳುತ್ತಿದ್ದರೆ ಅಥವಾ ದಿವಾಳಿಯೆಂದು ನ್ಯಾಯ ನಿರ್ಣಯಿಸಬೇಕೆಂದು ಅರ್ಜಿ ಸಲ್ಲಿಸಿದ್ದರೆ ಅಥವಾ ಹಾಗೆಂದು ನ್ಯಾಯ ನಿರ್ಣೀತನಾಗಿದ್ದರೆ, ಆ ಬಗ್ಗೆ ಹೊರಡಿಸಲಾದ ಲಿಖಿತ ಆದೇಶದ ಮೂಲಕ ತೆಗೆದುಹಾಕಬಹುದು.

೩. ಈ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಒಂದು ಯುಕ್ತ ಅವಕಾಶವನ್ನು ನೀಡಿದ ಹೊರತು, ಅವನ ಮೇಲೆ ಕ್ರಮವನ್ನು ಕೈಗೊಳ್ಳ ತಕ್ಕುದಲ್ಲ.



೪. ಸಂದರ್ಭಾನುಸಾರ, (೧)ನೇ ಉಪ-ಪ್ರಕರಣದ ಅಥವಾ (೨)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಅದನ್ನು ಹಾಗೆ ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ನಿಯಮಿಸಲಾದ ರೀತಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಕಳುಹಿಸ ತಕ್ಕುದು.

**೪೧. ವಿಶ್ವವಿದ್ಯಾಲಯ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಗೆ ಸಂಬಂಧಪಟ್ಟ ವಿವಾದಗಳು :** ಯಾವೊಬ್ಬ ವ್ಯಕ್ತಿಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ಇತರ ನಿಕಾಯದ ಸದಸ್ಯನಾಗಿ ಯಥೋಚಿತವಾಗಿ ನಾಮನಿರ್ದೇಶಿತ ವಾಗಿದ್ದಾನೆಯೇ ಅಥವಾ ಸದಸ್ಯನಾಗಿರಲು ಹಕ್ಕುಳ್ಳವನಾಗಿದ್ದಾನೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಪ್ರಶ್ನೆಯನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕುದು ಮತ್ತು ಅದರ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರತಕ್ಕುದು.

**೪೨. ಸಮಿತಿಗಳ ರಚನೆ :** ವಿಶ್ವವಿದ್ಯಾಲಯದ ಎಲ್ಲ ಪ್ರಾಧಿಕಾರಗಳು ಸಮಿತಿಗಳನ್ನು ರಚಿಸಲು ಅಥವಾ ಪುನರ್‌ರಚಿಸಲು ಮತ್ತು ತಾವು ಉಚಿತವೆಂದು ಭಾವಿಸುವ ತಮ್ಮ ಅಂಥ ಅಧಿಕಾರಗಳನ್ನು ಅವುಗಳಿಗೆ ಪ್ರತ್ಯಾಯೋಜಿಸಲು ಅಧಿಕಾರ ಹೊಂದಿರತಕ್ಕುದು. ಅಂಥ ಸಮಿತಿಗಳು, ಅನ್ಯಥಾ ಉಪಬಂಧಿಸಿರುವುದನ್ನುಳಿದು, ಸಂಬಂಧಪಟ್ಟ ಪ್ರಾಧಿಕಾರದ ಸದಸ್ಯರನ್ನು ಮತ್ತು ಪ್ರಾಧಿಕಾರವು ಪ್ರತಿಯೊಂದು ಸಂದರ್ಭದಲ್ಲಿ ತಾನು ಉಚಿತವೆಂದು ಭಾವಿಸಬಹುದಾದ ಅಂಥ ಇತರ ವ್ಯಕ್ತಿಗಳು ಯಾರಾದರೂ ಇದ್ದರೆ, ಅವರನ್ನು ಒಳಗೊಂಡಿರ ತಕ್ಕುದು.

**೪೩. ಮಾಹಿತಿಗಳನ್ನು ಪಡೆಯಲು ಅಧಿಕಾರ :** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ಯಾವುದೇ ಮಾಹಿತಿಯನ್ನು ವಿಶ್ವವಿದ್ಯಾಲಯದಿಂದ ಲಿಖಿತ ಆದೇಶದ ಮೂಲಕ ತರಿಸಿಕೊಳ್ಳಬಹುದು ಮತ್ತು ವಿಶ್ವವಿದ್ಯಾಲಯವು, ಅಂಥ ಮಾಹಿತಿಯು ಲಭ್ಯವಿದ್ದಲ್ಲಿ ಯುಕ್ತ

ಅವಧಿಯೊಳಗೆ ಅಂಥ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

ಪರಂತು, ವಿಶ್ವವಿದ್ಯಾಲಯವು ರಹಸ್ಯವೆಂದು ಪರಿಗಣಿಸುವ ಮಾಹಿತಿಯ ಸಂದರ್ಭದಲ್ಲಿ, ವಿಶ್ವವಿದ್ಯಾಲಯವು ಅದನ್ನು ಪ್ರೊ - ಚಾನ್ಸಲರ ಮುಂದೆ ಇಡಬಹುದು.

೪೪. **ಪ್ರಥಮ ಕುಲಪತಿಯವರ ನೇಮಕಾತಿ :** ೧೩ನೇ ಪ್ರಕರಣದ (೧)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಜಾರಿಯಲ್ಲಿ ಬಂದ ದಿನಾಂಕದಿಂದ ಆರು ತಿಂಗಳೊಳಗಾಗಿ ಪ್ರಥಮ ಕುಲಪತಿಯವರನ್ನು ಮೂರು ವರ್ಷಗಳಿಗೆ ಮೀರದ ಅವಧಿಗೆ ಮತ್ತು ತಾನು ಉಚಿತವೆಂದು ಭಾವಿಸುವ ಅಂಥ ಇತರ ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು.

ಪರಂತು, ಪ್ರಥಮ ಕುಲಪತಿಯವರಾಗಿ ನೇಮಿತವಾದ ವ್ಯಕ್ತಿಯು, ತಮ್ಮ ಪದಾವಧಿಯಲ್ಲಿ ಅರವತ್ತೈದು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದರೆ ತಮ್ಮ ಪದದಿಂದ ನಿವೃತ್ತರಾಗತಕ್ಕದ್ದು.

೪೫. **ಪ್ರಥಮ ಕುಲಸಚಿವರ ನೇಮಕಾತಿ :** ೧೫ನೇ ಪ್ರಕರಣದ (೧)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮ ಜಾರಿಯಲ್ಲಿ ಬಂದ ದಿನಾಂಕದಿಂದ ಆರು ತಿಂಗಳೊಳಗಾಗಿ ಪ್ರಥಮ ಕುಲಸಚಿವರನ್ನು ಮೂರು ವರ್ಷಗಳಿಗೆ ಮೀರದ ಅವಧಿಗೆ ಮತ್ತು ತಾನು ಉಚಿತವೆಂದು ಭಾವಿಸುವ ಅಂಥ ಇತರ ಷರತ್ತುಗಳ ಮೇಲೆ ತಾನು ನಿಗದಿಪಡಿಸಬೇಕಾದ ವೇತನದ ಮೇಲೆ ನೇಮಕ ಮಾಡತಕ್ಕದ್ದು.

ಪರಂತು, ಪ್ರಥಮ ಕುಲಸಚಿವರಾಗಿ ನೇಮಿತನಾದ ವ್ಯಕ್ತಿಯು ತಮ್ಮ ಪದಾವಧಿಯಲ್ಲಿ ಐವತ್ತೆಂಟು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದರೆ ತಮ್ಮ ಪದದಿಂದ ನಿವೃತ್ತರಾಗತಕ್ಕದ್ದು.

೪೬. **ಪ್ರಥಮ ಹಣಕಾಸು ಅಧಿಕಾರಿ ನೇಮಕಾತಿ :** ೧೬ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಆ ಅಧಿನಿಯಮವು ಜಾರಿಯಲ್ಲಿ ಬಂದ ದಿನಾಂಕದಿಂದ ಆರು ತಿಂಗಳೊಳಗಾಗಿ ಮೂರು ವರ್ಷಗಳಿಗೆ ಮೀರದ ಅವಧಿಗೆ ಮತ್ತು ತಾನು ಉಚಿತವೆಂದು ಭಾವಿಸಿದ ಅಂಥ ಇತರ ಷರತ್ತುಗಳ ಮೇಲೆ, ತಾನು ನಿಗದಿಪಡಿಸಬೇಕಾದ ವೇತನದ ಮೇಲೆ ನೇಮಕ ಮಾಡತಕ್ಕದ್ದು.



೪೭. **ಪ್ರಥಮ ಕುಲಪತಿಯವರ ತಾತ್ಕಾಲಿಕ ಅಧಿಕಾರಿಗಳು :**

೧. ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದಾದಂತೆ ಅಧಿಸೂಚಿತ ದಿನಾಂಕದಿಂದ ಆರು ತಿಂಗಳೊಳಗಾಗಿ ಅಥವಾ ಒಂದು ವರ್ಷಕ್ಕೆ ಮೀರದ ಅಂಥ ದೀರ್ಘ ಅವಧಿಯೊಳಗಾಗಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ, ಕಾರ್ಯಕಾರಿ ಸಮಿತಿ ಮತ್ತು ಅಂಥ ಇತರ ಪ್ರಾಧಿಕಾರಗಳನ್ನು ರಚಿಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು.

೨. ಪ್ರಥಮ ಕುಲಪತಿಯವರು ಸರ್ಕಾರದೊಂದಿಗೆ ಸಮಾಲೋಚಿಸಿ ಸರ್ಕಾರದ ಕಾರ್ಯನಿರ್ವಹಣೆಗೆ ಅಗತ್ಯವಿರಬಹುದಾದ ಅಂಥ ನಿಯಮಗಳನ್ನು ರಚಿಸತಕ್ಕದ್ದು.

೩. ೧ನೇ ಉಪ-ಪ್ರಕರಣದ ಅಡಿಯಲ್ಲಿ ರಚಿತವಾದ ಪ್ರಾಧಿಕಾರಗಳು, ಸರ್ಕಾರವು ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಂದು ಪ್ರಕಾರ್ಯಗಳನ್ನು ಚಲಾಯಿಸಲು ಪ್ರಾರಂಭ ಮಾಡತಕ್ಕದ್ದು.

೪. ಅವಶ್ಯವಿರಬಹುದಾದ ಅಂಥ ಪರಿನಿಯಮಗಳ ಕರಡನ್ನು ಸಿದ್ಧಪಡಿಸಿ, ಅನುಮೋದನೆಗಾಗಿ ಕಾರ್ಯಕಾರಿ ಸಮಿತಿಗೆ ಒಪ್ಪಿಸುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು. ಅಂಥ ಪರಿನಿಯಮಗಳು ರಚಿತವಾದಾಗ ಅವುಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸತಕ್ಕದ್ದು.

೫. ಈ ಅಧಿನಿಯಮದ ಮತ್ತು ಪರಿನಿಯಮಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ ಮತ್ತು ಒಂದು ಪ್ರಾಧಿಕಾರವು ಯಥೋಚಿತವಾಗಿ ರಚಿತವಾಗುವ ಅಂಥ ಕಾಲದವರೆಗೂ ಪ್ರಥಮ ಕುಲಪತಿಯವರು ಅಧಿನಿಯಮ ಮತ್ತು ಪರಿನಿಯಮಗಳ ಅಡಿಯಲ್ಲಿ, ಅಂಥ ಪ್ರಾಧಿಕಾರದ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ತಾತ್ಕಾಲಿಕವಾಗಿ ಯಾವೊಬ್ಬ ಅಧಿಕಾರಿಯನ್ನು ನೇಮಿಸಬಹುದು ಅಥವಾ ಯಾವುದೇ ಸಮಿತಿಯನ್ನು ರಚಿಸಬಹುದು.

**೪೮. ನೇಮಕಾತಿಯ ವಿಶೇಷ ವಿಧಾನ :**

೧. ಕಾರ್ಯಕಾರಿ ಸಮಿತಿಯು ತಾನು ಉಚಿತವೆಂದು ಭಾವಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಉನ್ನತ ವಿದ್ಯಾರ್ಹತೆ ಮತ್ತು ವೃತ್ತಿ ಪರಿಣತಿಯುಳ್ಳ ಒಬ್ಬ ವ್ಯಕ್ತಿಯನ್ನು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯನ್ನು ಸ್ವೀಕರಿಸಲು ಆಹ್ವಾನಿಸಬಹುದು ಮತ್ತು ಹಾಗೆ ಮಾಡಲು ಆ ವ್ಯಕ್ತಿಯು ಒಪ್ಪಿಕೊಂಡ ಮೇಲೆ ಕುಲಾಧಿಪತಿಯ ಅನುಮೋದನೆಗೆ ಒಳಪಟ್ಟು ಆ ಹುದ್ದೆಗೆ ಅವನನ್ನು ನೇಮಿಸಬಹುದು.

೨. ಕಾರ್ಯಕಾರಿ ಸಮಿತಿಯು, ನಿಯಮಿಸಲಾದ ರೀತಿಗನುಸಾರವಾಗಿ ಸಂಯುಕ್ತ ಯೋಜನೆಯನ್ನು ಕೈಗೊಳ್ಳುವುದಕ್ಕಾಗಿ ಇತರ ಯಾವುದೇ ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕರು ಅಥವಾ ಶೈಕ್ಷಣಿಕ ಸಿಬ್ಬಂದಿಯ ಇತರ ಯಾವೊಬ್ಬ ಸದಸ್ಯನನ್ನು ನೇಮಕ ಮಾಡಬಹುದು.

**೪೯. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ :** ಸರ್ಕಾರವು ಅಧಿಸೂಚನೆಯ ಮೂಲಕ, ಅನುಸೂಚಿಯ ಯಾವುದೇ ಪರಿನಿಯಮವನ್ನು ಮಾರ್ಪಡಿಸಬಹುದು. ತಿದ್ದುಪಡಿ ಮಾಡಬಹುದು ಅಥವಾ ಅನುಸೂಚಿಗೆ ಯಾವುದೇ ಪರಿನಿಯಮವನ್ನು ಹೊಸದಾಗಿ ಸೇರಿಸಬಹುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ನಂತರ, ಅನುಸೂಚಿಯಲ್ಲಿ ತದನುಸಾರವಾಗಿ ತಿದ್ದುಪಡಿಯಾಗಿದೆ ಎಂದು ಭಾವಿಸತಕ್ಕುದು.

**೫೦. ತೊಂದರೆಗಳನ್ನು ನಿವಾರಿಸಲು ಅಧಿಕಾರ :**

೧. ಅಧಿಸೂಚಿತ ದಿನಾಂಕದ ತರುವಾಯ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಪ್ರಥಮ ರಚನೆ ಅಥವಾ ಪುನರ್‌ರಚನೆಯ ಬಗ್ಗೆ ಅಥವಾ ಈ ಅಧಿನಿಯಮದ ಉಪಬಂಧಗಳು ಪರಿಣಾಮಗೊಳ್ಳುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ, ತೊಂದರೆಯನ್ನು ನಿವಾರಿಸಲು ಅವಶ್ಯ ಅಥವಾ ಯುಕ್ತವೆಂದು ತೋರಬಹುದಾದ ಅಂಥ ಉಪಬಂಧವನ್ನು ಕಲ್ಪಿಸಬಹುದು.



ಪರಂತು, ೧ನೇ ಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾಲಯವು ಸ್ಥಾಪನೆಗೊಂಡ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕುದಲ್ಲ.

೨. (೧)ನೇ ಉಪ ಪ್ರಕರಣದ ಅಡಿಯಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧಗಳ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ಹೊರಡಿಸಿದ ಮೇಲೆ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕುದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ರಾಜ್ಯ ವಿಧಾನ ಮಂಡಲದ ಯಾವುದೇ ಸದನವು ಯಾವುದೇ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ ಅಥವಾ ಯಾವುದೇ ಅಧಿಸೂಚನೆಯು ಪರಿಣಾಮಕಾರಿಯಾಗತಕ್ಕುದಲ್ಲವೆಂದು ನಿರ್ದೇಶಿಸಿದರೆ ಮತ್ತು ಈ ಮಾರ್ಪಾಟು ಅಥವಾ ನಿರ್ದೇಶನಗಳನ್ನು ಇನ್ನೊಂದು ಸದನವು ಒಪ್ಪಿದರೆ ಅಂಥ ಅಧಿಸೂಚನೆಯೂ, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೀತಿಯಲ್ಲಿಯೇ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ. ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದಿಯಾತಿ ಆ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದನ್ನು ಅಮಾನ್ಯಗೊಳಿಸತಕ್ಕುದಲ್ಲ.

## ಅನುಸೂಚಿ

(೩೨ (೧)ನೇ ಪ್ರಕರಣವನ್ನು ನೋಡಿ)

# ವಿಶ್ವವಿದ್ಯಾಲಯದ ಮೊದಲನೇ ಪರಿನಿಯಮಗಳು

**೧. ಕುಲಸಚಿವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು :**

೧. ಕುಲಸಚಿವ ಹುದ್ದೆಯ ಧಾರಕನು ಪ್ರಾಧ್ಯಾಪಕ ದರ್ಜೆಗಿಂತ ಕಡಿಮೆಯದಲ್ಲದ ದರ್ಜೆಯ ಒಬ್ಬ ವಿದ್ಯಾ ಸಂಸ್ಥೆಯ ಸದಸ್ಯನಾಗಿರತಕ್ಕದು.

೨. ಕುಲಸಚಿವರ ಉಪಲಬ್ಧಿಗಳು ಹಾಗೂ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದು.

೩. ಕುಲಸಚಿವರ ಪದವು ರಿಕ್ತವಾದಾಗ ಅಥವಾ ಅಸ್ವಸ್ಥತೆ, ಗೈರುಹಾಜರಿ ಅಥವಾ ಇತರ ಯಾವುದೇ ಕಾರಣಕ್ಕಾಗಿ ಕುಲಸಚಿವರು ತಮ್ಮ ಪದದ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥರಾದಾಗ, ಕುಲಸಚಿವರ ಕರ್ತವ್ಯಗಳನ್ನು ಈ ಉದ್ದೇಶಕ್ಕಾಗಿ ಕುಲಪತಿಯವರು ನೇಮಿಸಬಹುದಾದ ಅಂಥ ವ್ಯಕ್ತಿಯು ನಿರ್ವಹಿಸತಕ್ಕದು.

೪. (ಎ) ಕುಲಸಚಿವರು, ಕಾರ್ಯಕಾರಿ ಸಮಿತಿಯ ಆದೇಶಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಬೋಧಕರು ಮತ್ತು ಶೈಕ್ಷಣಿಕ ಸಿಬ್ಬಂದಿಯನ್ನು ಹೊರತುಪಡಿಸಿ ಅಂಥ ಇತರ ಉದ್ಯೋಗಿಗಳ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳುವ ಮತ್ತು ಅವರನ್ನು ವಿಚಾರಣೆಯಾಗುವವರೆಗೆ ಅಮಾನತ್ತಿನಲ್ಲಿರಿಸುವ ಮತ್ತು ಅವರಿಗೆ ಎಚ್ಚರಿಕೆ ನೀಡುವ ಅಥವಾ ಅವರಿಗೆ ವಾಗ್ದಂಡನೆಯ ಮೂಲಕ ದಂಡವನ್ನು ವಿಧಿಸುವ ಅಥವಾ ಅವರ ವೇತನ ಬಡ್ತಿಯನ್ನು ತಡೆಹಿಡಿಯುವ ಅಧಿಕಾರವನ್ನು ಹೊಂದಿರತಕ್ಕದು.

ಪರಂತು, ಸಂಬಂಧಪಟ್ಟ ವ್ಯಕ್ತಿಗೆ, ಉದ್ದೇಶಿತ ಕ್ರಮದ ಬಗ್ಗೆ ಕಾರಣ



ತೋರಿಸಲು ಯುಕ್ತ ಅವಕಾಶವನ್ನು ನೀಡದ ಹೊರತು ಅಂಥ ಯಾವುದೇ ದಂಡವನ್ನು ವಿಧಿಸತಕ್ಕದಲ್ಲ.

೫. (ಎ) ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ದಂಡವನ್ನು ವಿಧಿಸುವ ಕುಲಸಚಿವರ ಯಾವುದೇ ಆದೇಶದ ವಿರುದ್ಧ ಕುಲಪತಿಯವರಿಗೆ ಅಪೀಲು ಇರತಕ್ಕದು.

೬. ಕುಲಸಚಿವರ ಅಧಿಕಾರಗಳನ್ನು ಮೀರಿದ ಶಿಕ್ಷೆಯನ್ನು ವಿಧಿಸಬೇಕೆಂದು ವಿಚಾರಣೆಯಿಂದ ವ್ಯಕ್ತಗೊಂಡಲ್ಲಿ ಕುಲಸಚಿವರು, ವಿಚಾರಣೆಯು ಮುಕ್ತಾಯವಾದ ನಂತರ ತಮ್ಮ ಶಿಫಾರಸ್ಸುಗಳೊಂದಿಗೆ ಒಂದು ವರದಿಯನ್ನು ಕುಲಪತಿಯವರಿಗೆ ಸಲ್ಲಿಸತಕ್ಕದು.

ಪರಂತು, ದಂಡವನ್ನು ವಿಧಿಸುವ ಕುಲಪತಿಯವರ ಆದೇಶದ ವಿರುದ್ಧ ಕಾರ್ಯಕಾರಿ ಸಮಿತಿಗೆ ಒಂದು ಅಪೀಲು ಇರತಕ್ಕದು.

೭. (ಬಿ) ಖಂಡ ಅಥವಾ (ಸಿ) ಖಂಡದ ಅಡಿಯಲ್ಲಿ ಯಾವುದೇ ಅಪೀಲನ್ನು ಅಪೀಲುದಾರನು ಅಪೀಲಿನ ವಿರುದ್ಧದ ಆದೇಶವನ್ನು ತಾನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳು ಮುಕ್ತಾಯವಾದ ತರುವಾಯ ಸಲ್ಲಿತಕ್ಕದಲ್ಲ.

೮. ಕುಲಸಚಿವರು ಆಡಳಿತ ಮಂಡಲಿ, ಕಾರ್ಯಕಾರಿ ಸಮಿತಿ, ಫ್ಯಾಕಲ್ಟಿಗಳು ಮತ್ತು ಅಧ್ಯಯನ ಮಂಡಲಿಗಳ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದು. ಆದರೆ ಅವರನ್ನು ಆ ಯಾವುದೇ ಪ್ರಾಧಿಕಾರಗಳ ಸದಸ್ಯರೆಂದು ಭಾವಿಸತಕ್ಕದಲ್ಲ.

೯. ಎ. ದಾಖಲೆಗಳು, ಸಾಮಾನ್ಯ ಮೊಹರು ಮತ್ತು ಕಾರ್ಯಕಾರಿ ಸಮಿತಿಯು ತನ್ನ ವಶಕ್ಕೆ ಒಪ್ಪಿಸತಕ್ಕ ವಿಶ್ವವಿದ್ಯಾಲಯದ ಅಂಥ ಇತರ ಸ್ವತ್ತುಗಳ ಅಭಿರಕ್ಷಕನಾಗಿರುವುದು.

೧೦. ಆಡಳಿತ ಮಂಡಳಿ, ಕಾರ್ಯಕಾರಿ ಸಮಿತಿ, ಫ್ಯಾಕಲ್ಟಿಗಳು, ಅಧ್ಯಯನ ಮಂಡಲಿ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳಿಂದ ನೇಮಕಗೊಂಡ ಯಾವುದೇ ಸಮಿತಿಯ ಸಭೆಗಳನ್ನು ಸಮಾವೇಶಗೊಳಿಸುವ ಬಗ್ಗೆ ಎಲ್ಲ ನೋಟೀಸುಗಳನ್ನು ಹೊರಡಿಸುವುದು.

ಸಿ. ಆಡಳಿತ ಮಂಡಲಿ, ಕಾರ್ಯಕಾರಿ ಸಮಿತಿ, ಫ್ಯಾಕಲ್ಟಿಗಳು, ಅಧ್ಯಯನ ಮಂಡಲಿ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳಿಂದ ನೇಮಕಗೊಂಡ ಯಾವುದೇ ಸಮಿತಿಕಯ ಸಭೆಗಳ ಎಲ್ಲ ವರದಿಗಳನ್ನು ಇಡುವುದು.

ಡಿ. ಕಾರ್ಯಕಾರಿ ಸಮಿಯ ಅಧಿಕೃತ ಪತ್ರವ್ಯವಹಾರಗಳನ್ನು ನಡೆಸುವುದು.

ಇ. ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸಭೆಗಳ ವಿಷಯಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದೊಡನೆ ಮತ್ತು ಅಂಥ ಸಭೆಗಳ ವ್ಯವಹರಣೆಗಳ ವರದಿಗಳನ್ನು ಕುಲಾಧಿಪತಿಯವರಿಗೆ ಒದಗಿಸುವುದು ಮತ್ತು

ಎಫ್. ಪರಿನಿಮಯಗಳಲ್ಲಿ ನಿಯಮಿಸಬಹುದಾದಂತೆ ಅಥವಾ ಆಗಿಂದಾಗ್ಗೆ ಕಾರ್ಯಕಾರಿ ಸಮಿತಿ ಅಥವಾ ಕುಲಪತಿಯವರು ಆಗತ್ಯಪಡಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು ಕುಲಸಚಿವರ ಕರ್ತವ್ಯಗಳಾಗಿರತಕ್ಕುದು.

**೨. ಹಣಕಾಸು ಅಧಿಕಾರಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು**

೧. ಹಣಕಾಸು ಅಧಿಕಾರಿಯ ಉಪಲಬ್ಧಿಗಳು ಮತ್ತು ಇತರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕುದು. ಹಣಕಾಸು ಅಧಿಕಾರಿಯು ತನ್ನ ಐವತ್ತೆಂಟನೆಯ ವಯಸ್ಸು ಪೂರ್ಣಗೊಂಡ ಮೇಲೆ ಅಥವಾ ೧೬ನೇ ಪ್ರಕರಣದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ ಇವೆರಡರಲ್ಲಿ ಯಾವುದು ಮೊದಲೋ ಆಗ ನಿವೃತ್ತನಾಗತಕ್ಕುದು.

ಪರಂತು, ಹಣಕಾಸು ಅಧಿಕಾರಿಯು ಅವನಿಗೆ ಐವತ್ತೆಂಟು ವರ್ಷಗಳು ಪೂರ್ಣಗೊಂಡರೂ ತನ್ನ ಉತ್ತರಾಧಿಕಾರಿಯು ನೇಮಕಗೊಳ್ಳುವವರೆಗೆ ಮತ್ತು ಪದಧಾರಣ ಮಾಡುವವರೆಗೆ ಅಥವಾ ಒಂದು ವರ್ಷದ ಅವಧಿ ಮುಕ್ತಾಯವಾಗುವವರೆಗೆ ಇವೆರಡರಲ್ಲಿ ಯಾವುದೇ ಮೊದಲೋ ಅವರೆಗೆ ಪದದಲ್ಲಿ ಮುಂದುವರಿಯತಕ್ಕುದು.

೨. ಹಣಕಾಸು ಅಧಿಕಾರಿಯ ಪದವು ರಿಕ್ತವಾದಾಗ ಅಥವಾ ಅಸ್ವಸ್ಥತೆ, ಗೈರು ಹಾಜರಿ ಅಥವಾ ಇತರ ಯಾವುದೇ ಕಾರಣಕ್ಕಾಗಿ ಹಣಕಾಸು ಅಧಿಕಾರಿಯು ತನ್ನ ಪದದ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ ಹಣಕಾಸು



ಅಧಿಕಾರಿಯ ಕರ್ತವ್ಯಗಳನ್ನು ಈ ಉದ್ದೇಶಕ್ಕಾಗಿ ಕುಲಪತಿಯವರು ನೇಮಿಸಬಹುದಾದ ಅಂಥ ವ್ಯಕ್ತಿಯು ನಿರ್ವಹಿಸತಕ್ಕುದು.

೩. ಹಣಕಾಸು ಅಧಿಕಾರಿಯು ಹಣಕಾಸು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕುದು. ಆದರೆ ಅವನನ್ನು ಸಮಿತಿಯ ಸದಸ್ಯನೆಂದು ಭಾವಿಸತಕ್ಕುದಲ್ಲ.

೪. (ಎ) ಹಣಕಾಸು ಅಧಿಕಾಯ ವಿಶ್ವವಿದ್ಯಾಲಯದ ನಿಧಿಗಳ ಮೇಲೆ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕುದು ಮತ್ತು ಹಣಕಾಸು ನೀತಿಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡುತಕ್ಕುದು ಮತ್ತು

(ಬಿ) ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಇತರ ಕಾರ್ಯಕ್ರಮಗಳನ್ನು ನಿರ್ವಹಿಸತಕ್ಕುದು.

ಪರಂತು, ಹಣಕಾಸು ಅಧಿಕಾರಿಯು ಕಾರ್ಯಕಾರಿ ಸಮಿತಿಯ ಪೂರ್ವಾನುಮೋದನೆಯಿಲ್ಲದೇ ಯಾವುದೇ ವೆಚ್ಚವನ್ನು ಭರಿಸತಕ್ಕುದಲ್ಲ ಅಥವಾ ನಿಯಮಿಸಬಹುದಾದ ಅಂಥ ಮೊತ್ತವನ್ನು ಮೀರಿದ ಯಾವುದೇ ಬಂಡವಾಳವನ್ನು ಹೂಡತಕ್ಕುದಲ್ಲ.

೫. ಕಾರ್ಯಕಾರಿ ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಹಣಕಾಸು ಅಧಿಕಾರಿಯು:

ಎ. ನ್ಯಾಸ ಮತ್ತು ದತ್ತಿ ನೀಡಲಾದ ಸ್ವತ್ತೂ ಸೇರಿದಂತೆ ವಿಶ್ವವಿದ್ಯಾಲಯದ ಸ್ವತ್ತು ಮತ್ತು ಬಂಡವಾಳ ಹೂಡಿಕೆಗಳನ್ನು ಧಾರಣ ಮಾಡಿ, ಅದನ್ನು ನಿರ್ವಹಿಸತಕ್ಕುದು.

ಬಿ. ಒಂದು ವರ್ಷದ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳು ಕಾರ್ಯಕಾರಿ ಸಮಿತಿಯು ನಿಗದಿಪಡಿಸಿದ ಮಿತಿಗಳನ್ನು ಮೀರಿಲ್ಲ ಮತ್ತು ಎಲ್ಲ ಹಣಗಳನ್ನು ಅವುಗಳನ್ನು ಯಾವ ಉದ್ದೇಶಕ್ಕಾಗಿ ನೀಡಲಾಗಿದೆಯೋ ಅಥವಾ ಹಂಚಲಾಗಿದೆಯೋ ಅದಕ್ಕಾಗಿಯೇ ವೆಚ್ಚ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕುದು

ಸಿ. ವಾರ್ಷಿಕ ಲೆಕ್ಕಪತ್ರಗಳು, ಆರ್ಥಿಕ ಅಂದಾಜುಗಳು ಮತ್ತು ವಿಶ್ವವಿದ್ಯಾಲಯದ ಆಯವ್ಯಯ ಪತ್ರ ಇವುಗಳನ್ನು ಸಿದ್ಧಪಡಿಸಿ, ಕಾರ್ಯಕಾರಿ ಸಮಿತಿಗೆ ಸಲ್ಲಿಸಲು ಜವಾಬ್ದಾರನಾಗಿರತಕ್ಕುದು.

ಡಿ. ನಗದು ಮತ್ತು ಬ್ಯಾಂಕಿನಲ್ಲಿರುವ ಶಿಲ್ಕು ಮತ್ತು ಬಂಡವಾಳ ಹೂಡಿಕೆಗಳ ಮೇಲೆ ನಿರಂತರ ಗಮನವಿಡತಕ್ಕುದು.

ಇ. ಆದಾಯದಲ್ಲಿ ಉಂಟಾಗಿರುವ ಪ್ರಗತಿ ಮತ್ತು ಸಂಗ್ರಹಣೆಯನ್ನು ಮಾಡಲು ಕೈಗೊಳ್ಳಬೇಕಾದ ವಿಧಾನಗಳ ಮೇಲೆ ಗಮನವಿಡತಕ್ಕುದು.

ಎಫ್. ಕಟ್ಟಡಗಳು, ಭೂಮಿ, ಪೀಠೋಪಕರಣಗಳು ಮತ್ತು ಉಪಕರಣಗಳ ರಿಜಿಸ್ಟ್ರಾರುಗಳನ್ನು ತಹಲ್‌ವರೆಗೆ ಇಡಲಾಗಿರುವ ಬಗ್ಗೆ ಮತ್ತು ವಿಶ್ವವಿದ್ಯಾನಿಲಯದಿಂದ ನಿರ್ವಹಿಸಲಾದ ಎಲ್ಲ ಕಚೇರಿಗಳು ಮತ್ತು ಇತರ ಸ್ಥಳಗಳಲ್ಲಿರುವ ಉಪಕರಣಗಳು ಮತ್ತು ಇತರ ಬಳಕೆಯ ಸಾಧನೆಗಳ ದಾಸ್ತಾನು ತಪಾಸಣೆ ನಡೆಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕುದು.

ಜಿ. ಯಾವುದೇ ಅನಧಿಕೃತ ವೆಚ್ಚ ಅಥವಾ ಇತರ ಹಣಕಾಸಿಗೆ ಸಂಬಂಧಪಟ್ಟ ಅಕ್ರಮತೆಯನ್ನು ಕುಲಪತಿಯವರ ಗಮನಕ್ಕೆ ತಂದು ತಪ್ಪಿತಸ್ಥರ ವಿರುದ್ಧ ಕೈಗೊಳ್ಳಬೇಕಾದ ಸೂಕ್ತಕ್ರಮವನ್ನು ಸೂಚಿಸತಕ್ಕುದು ಮತ್ತು

ಎಚ್. ವಿಶ್ವವಿದ್ಯಾಲಯವು ನಿರ್ವಹಿಸುವ ಯಾವುದೇ ಕಛೇರಿ ಅಥವಾ ಇತರ ಸ್ಥಳದಿಂದ ತನ್ನ ಕರ್ತವ್ಯಗಳ ನಿರ್ವಹಣೆಗೆ ತಾನು ಅಗತ್ಯವೆಂದು ಪರಿಗಣಿಸಬಹುದಾದ ಮಾಹಿತಿ ಅಥವಾ ವಿವರಣ ಪಟ್ಟಿಗಳನ್ನು ತರಿಸಿಕೊಳ್ಳತಕ್ಕುದು.

ಐ. ವಿಶ್ವವಿದ್ಯಾಲಯಕ್ಕೆ ಸಂದಾಯವಿರುವ ಯಾವುದೇ ಹಣಕ್ಕಾಗಿ ಹಣಕಾಸು ಅಧಿಕಾರಿ ಅಥವಾ ಈ ಸಂಬಂಧವಾಗಿ ಕಾರ್ಯಕಾರಿ ಸಮಿತಿಯಿಂದ ಯಥೋಚಿತವಾಗಿ ಪ್ರಾಧಿಕೃತರಾದ ವ್ಯಕ್ತಿ ಅಥವಾ ವ್ಯಕ್ತಿಗಳು ನೀಡುವ ರಸೀದಿಗಳು ಅಂಥ ಹಣ ಸಂದಾಯದ ಸಾಕಷ್ಟು ರುಜುವಾತಾಗಿರತಕ್ಕುದು.

೩. **ಫ್ಯಾಕಲ್ಟಿಗಳು ಮತ್ತು ವಿಭಾಗಗಳು :** ಪ್ರತಿಯೊಂದು ಫ್ಯಾಕಲ್ಟಿಯಲ್ಲಿ ಈ ಕೆಳಗೆ ಹೇಳಲಾದಂಥ ವಿಭಾಗಗಳೊಳಗೊಂಡ, ಈ ಮುಂದೆ ನಮೂದಿಸಲಾದ ಫ್ಯಾಕಲ್ಟಿಗಳು ಇರತಕ್ಕುದು.

**೧. ಭಾಷಾ ಫ್ಯಾಕಲ್ಟಿ**

೧. ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

೨. ಕನ್ನಡ ಭಾಷಾಧ್ಯಯನ ವಿಭಾಗ



೩. ವಿದೇಶಿ ಮತ್ತು ಭಾರತೀಯ ಭಾಷೆಗಳ ವಿಭಾಗ - ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

೪. ಭಾಷಾಂತರ ವಿಭಾಗ - ಭಾಷಾಂತರ ಅಧ್ಯಯನ

೫. ಮಹಿಳಾ ಅಧ್ಯಯನ ವಿಭಾಗ

೬. ಹಸ್ತಪ್ರತಿಶಾಸ್ತ್ರ ವಿಭಾಗ

೭. ಕನ್ನಡ ವಲಸಿಗರ ವಿಭಾಗ

**೨. ಲಲಿತ ಕಲೆಗಳು**

೧. ವಾಸ್ತುಶಿಲ್ಪ, ಶಿಲ್ಪಶಾಸ್ತ್ರ ಮತ್ತು ಪ್ರತಿಮಾಶಾಸ್ತ್ರ ವಿಭಾಗ

೨. ವರ್ಣಚಿತ್ರ ಮತ್ತು ಇತರ ದೃಶ್ಯಕಲೆಗಳ ವಿಭಾಗ

೩. ನಾಟಕ ವಿಭಾಗ

೪. ಸಂಗೀತ ಮತ್ತು ನೃತ್ಯ ವಿಭಾಗ

೫. ಜಾನಪದ ವಿಭಾಗ

**೩. ಸಮಾಜ ವಿಜ್ಞಾನಗಳ ಫ್ಯಾಕಲ್ಟಿ**

೧. ಇತಿಹಾಸ ವಿಭಾಗ

೨. ಪುರಾತತ್ವ ವಿಭಾಗ - ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

೩. ಶಾಸನಶಾಸ್ತ್ರ ವಿಭಾಗ

೪. ಧರ್ಮ ಮತ್ತು ತತ್ತ್ವಶಾಸ್ತ್ರ ವಿಭಾಗ

೫. ಮಾನವ ಶರೀರ ಶಾಸ್ತ್ರ ವಿಭಾಗ

೬. ಅಭಿವೃದ್ಧಿ ಅಧ್ಯಯನಗಳ ವಿಭಾಗ

೭. ಬುಡಕಟ್ಟುಗಳ ಅಧ್ಯಯನ ವಿಭಾಗ

**೪. ವಿಜ್ಞಾನಗಳು**

೧. ವಿಜ್ಞಾನಗಳ ಇತಿಹಾಸ ವಿಭಾಗ

೨. ಮನುಕುಲ ಜೀವನ ವಿಜ್ಞಾನಗಳ ವಿಭಾಗ

೩. ಖಗೋಳಶಾಸ್ತ್ರ ಮತ್ತು ತತ್ಸಂಬಂಧಿ ವಿಜ್ಞಾನಗಳ ವಿಭಾಗ

೪. ಆಯುರ್ವೇದ ಮತ್ತು ಗೃಹವೈದ್ಯ ವಿಭಾಗ

## ೪. ಫ್ಯಾಕಲ್ಟಿಗಳ ಡೀನರು :

೧. ಕುಲಪತಿಯವರು ಪ್ರತಿಯೊಬ್ಬ ಡೀನರನ್ನು ಮೂರು ವರ್ಷಗಳ ಅವಧಿಗೆ ಫ್ಯಾಕಲ್ಟಿಯಲ್ಲಿರುವ ಪ್ರಾಧ್ಯಾಪಕ ಪೈಕಿಯಿಂದ ನೇಮಕ ಮಾಡತಕ್ಕದ್ದು ಮತ್ತು ಅವರು ಪುನರ್ನೇಮಕಾತಿಗೆ ಅರ್ಹರಾಗಿರತಕ್ಕದ್ದು.

ಪರಂತು, ಯಾವುದೇ ಕಾಲದಲ್ಲಿ ಫ್ಯಾಕಲ್ಟಿಯಲ್ಲಿ ಡೀನರು ಪ್ರಾಧ್ಯಾಪಕರು ಇಲ್ಲದಿದ್ದರೆ ಕುಲಪತಿಯವರು ಡೀನರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

೨. ಡೀನರ ಪದವು ರಿಕ್ತವಾಗಿದ್ದಾಗ ಅಥವಾ ಅಸ್ವಸ್ಥತೆ, ಗೈರುಹಾಜರಿ ಅಥವಾ ಇತರ ಯಾವುದೇ ಕಾರಣಕ್ಕಾಗಿ ಡೀನರು ತಮ್ಮ ಪದದ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥರಾದಾಗ, ಕುಲಪತಿಯವರು ಈ ಉದ್ದೇಶಕ್ಕಾಗಿ ನೇಮಿಸಬಹುದಾದ ಅಂಥ ವ್ಯಕ್ತಿಯು ಆ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

೩. ಡೀನರು ಫ್ಯಾಕಲ್ಟಿಯ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಫ್ಯಾಕಲ್ಟಿಯಲ್ಲಿ ಸಂಶೋಧನೆಯನ್ನು ನಡೆಸುವುದಕ್ಕೆ ಮತ್ತು ಅದರ ಗುಣಮಟ್ಟವನ್ನು ಕಾಪಾಡುವುದಕ್ಕೆ ಜವಾಬ್ದಾರರಾಗಿರತಕ್ಕದ್ದು. ಡೀನರಿಗೆ ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳು ಇರತಕ್ಕದ್ದು.

೪. ಡೀನರು, ಸಂದರ್ಭಾನುಸಾರ, ಯಾವುದೇ ಅಧ್ಯಯನ ಮಂಡಲಿ ಅಥವಾ ಫ್ಯಾಕಲ್ಟಿ ಸಮಿತಿಯ ಸಭೆಗಳಲ್ಲಿ ಹಾಜರಿರಲು ಮತ್ತು ಮಾತನಾಡಲು ಹಕ್ಕನ್ನು ಹೊಂದಿರತಕ್ಕದ್ದು. ಆದರೆ ಅವರು ಅಲ್ಲಿಯ ಸದಸ್ಯರಾಗಿದ್ದ ಹೊರತು ಮತದಾನದ ಹಕ್ಕು ಹೊಂದಿರತಕ್ಕದ್ದಲ್ಲ.

## ೫. ಆಯ್ಕೆ ಸಮಿತಿಗಳು :

೧. ವಿಶ್ವವಿದ್ಯಾಲಯವು ನಿರ್ವಹಿಸುವ ಸಂಸ್ಥೆಗಳಲ್ಲಿಯ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಮತ್ತು ಗ್ರಂಥಪಾಲಕರ ಹುದ್ದೆಗಳಿಗೆ ನೇಮಕ ಮಾಡುವ ಬಗ್ಗೆ ಕಾರ್ಯಕಾರಿ ಸಮಿತಿಗೆ ಶಿಫಾರಸ್ಸು ಮಾಡಲು ಒಂದು ಆಯ್ಕೆ ಸಮಿತಿ ಇರತಕ್ಕದ್ದು.



೨. ಕೆಳಕಂಡ ಕೋಷ್ಟಕದ (೧)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಹುದ್ದೆಗಳ ನೇಮಕಾತಿಗಾಗಿ ಆಯ್ಕೆ ಸಮಿತಿಯು ಕುಲಪತಿ, ಸರ್ಕಾರದ ಒಬ್ಬ ನಾಮನಿರ್ದೇಶಿತ ವ್ಯಕ್ತಿ ಮತ್ತು ಸದರಿ ಕೋಷ್ಟಕದ (೨)ನೇ ಅಂಕಣದಲ್ಲಿಯ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಲಾದ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು ಮತ್ತು ಇಲಾಖಾ ಮುಖ್ಯಸ್ಥರಿಲ್ಲದಿರುವ ಕಡೆ ನೇಮಕಾತಿಯ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯು ತನ್ನ ಸದಸ್ಯರ ಪೈಕಿಯಿಂದ ನಾಮನಿರ್ದೇಶನ ಮಾಡಿರುವ ವ್ಯಕ್ತಿಯನ್ನು ಸಹ ಒಳಗೊಂಡಿರತಕ್ಕದ್ದು.

**ಕೋಷ್ಟಕ**

| (೧) | (೨) |
|---|---|
| ಪ್ರಾಧ್ಯಾಪಕರು, ಸಹ - ಪ್ರಾಧ್ಯಾಪಕರು | (i) ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಅವರು ಪ್ರಾಧ್ಯಾಪಕರಾಗಿದ್ದರೆ<br>(ii) ಕುಲಪತಿಯವರಿಂದ ನಾಮನಿರ್ದೇಶಿತರಾಗಬೇಕಾದ ಒಬ್ಬ ಡೀನ್ ಅಥವಾ ಪ್ರಾಧ್ಯಾಪಕರು<br>(iii) ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಸಂಬಂಧಪಡುವ ವಿಷಯಗಳಲ್ಲಿ ವಿಶೇಷ ಜ್ಞಾನ ಅಥವಾ ಆಸಕ್ತಿಯುಳ್ಳ ಕಾರ್ಯಕಾರಿ ಸಮಿತಿಯಿಂದ ನಾಮನಿರ್ದೇಶಿತ ವಿಶ್ವವಿದ್ಯಾಲಯದ ಸೇವೆಯಲ್ಲಿರದ ಮೂವರು ವ್ಯಕ್ತಿಗಳು |
| ಸಹಾಯಕ ಪ್ರಾಧ್ಯಾಪಕರು | (i) ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು<br>(ii) ಕುಲಪತಿಯವರಿಂದ ನಾಮನಿರ್ದೇಶಿತರಾಗಬೇಕಾದ ಒಬ್ಬ ಪ್ರಾಧ್ಯಾಪಕರು<br>(iii) ಸಹಾಯಕ ಪ್ರಾಧ್ಯಾಪಕರಿಗೆ ಸಂಬಂಧಪಡುವ ವಿಷಯಗಳಲ್ಲಿ ವಿಶೇಷ ಜ್ಞಾನ ಅಥವಾ ಆಸಕ್ತಿಯುಳ್ಳ, ಕಾರ್ಯಕಾರಿ ಸಮಿತಿಯಿಂದ ನಾಮನಿರ್ದೇಶಿತರಾದ, ವಿಶ್ವವಿದ್ಯಾಲಯದ ಸೇವೆಯಲ್ಲಿರದ ಇಬ್ಬರು ವ್ಯಕ್ತಿಗಳು. |

ಗ್ರಂಥಪಾಲಕ | (i) ಗ್ರಂಥಾಲಯ ವಿಜ್ಞಾನ ಅಥವಾ ಗ್ರಂಥಾಲಯ ಆಡಳಿತದ ಬಗ್ಗೆ ವಿಶೇಷ ಜ್ಞಾನವಿರುವ ಕಾರ್ಯಕಾರಿ ಸಮಿತಿಯಿಂದ ನಾಮನಿರ್ದೇಶಿತರಾಗಬೇಕಾದ, ವಿಶ್ವವಿದ್ಯಾಲಯದ ಸೇವೆಯಲ್ಲಿರದ ಇಬ್ಬರು ವ್ಯಕ್ತಿಗಳು
(ii) ಕಾರ್ಯಕಾರಿ ಸಮಿತಿಯಿಂದ ನಾಮನಿರ್ದೇಶಿತನಾದ ವಿಶ್ವವಿದ್ಯಾಲಯದ ಸೇವೆಯಲ್ಲಿರದ ಒಬ್ಬ ವ್ಯಕ್ತಿ

ವಿವರಣೆ - I ಆಂತರಿಕ ಸುವ್ಯವಸ್ಥಾಪನಾ ಯೋಜನೆಗಾಗಿ ನೇಮಕಾತಿಗಳನ್ನು ಮಾಡುತ್ತಿರುವಲ್ಲಿ, ಯೋಜನೆಯ ಮುಖ್ಯಸ್ಥನನ್ನು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥನೆಂದು ಭಾವಿಸತಕ್ಕುದು.

ವಿವರಣೆ - II ನಾಮನಿರ್ದೇಶಿತರಾಗಬೇಕಾದ ಪ್ರಾಧ್ಯಾಪಕರು, ಆಯ್ಕೆ ಮಾಡಲಾಗುವ ವಿಶೇಷ ವಿಷಯಕ್ಕೆ ಸಂಬಂಧಿಸಿದ ಪ್ರಾಧ್ಯಾಪಕರಾಗಿರತಕ್ಕುದು ಮತ್ತು ಕುಲಪತಿಯವರು, ಪ್ರಾಧ್ಯಾಪಕರನ್ನು ನಾಮನಿರ್ದೇಶಿಸುವುದಕ್ಕೆ ಮುಂಚೆ ಇಲಾಖಾ ಮುಖ್ಯಸ್ಥರು ಮತ್ತು ಫ್ಯಾಕಲ್ಟಿ ಡೀನರೊಂದಿಗೆ ಸಮಾಲೋಚಿಸತಕ್ಕುದು.

ವಿವರಣೆ - III (೧) (೨)ನೇ ಅಂಕಣದಲ್ಲಿ ಉಲ್ಲೇಖಿಸಲಾದ ವಿಶೇಷ ವಿಷಯಕ್ಕೆ ಸಂಬಂಧಿಸಿದಂತೆ, ಸಂದರ್ಭಾನುಸಾರ, ಕಡೇ ಪಕ್ಷ ನಾಲ್ವರ ಪೈಕಿ ಮೂರು ಅಥವಾ ಮೂವರು ಸದಸ್ಯರ ಪೈಕಿ ಇಬ್ಬರು ಆಯ್ಕೆ ಸಮಿತಿಯ ಸಭೆಯಲ್ಲಿ ಹಾಜರಿರತಕ್ಕುದು.

(ಕ) ಕುಲಪತಿಯವರು ಆಯ್ಕೆ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸತಕ್ಕುದು.

(ಖ) ಆಯ್ಕೆ ಸಮಿತಿಯ ಸಭೆಗಳನ್ನು ಕುಲಪತಿಯವರು ಸಮಾವೇಶಗೊಳಿಸತಕ್ಕುದು.

(ಗ). ಶಿಫಾರಸ್ಸುಗಳನ್ನು ಮಾಡುವಲ್ಲಿ ಆಯ್ಕೆ ಸಮಿತಿಯು ಅನುಸರಿಸಬೇಕಾದ ಕಾರ್ಯ ವಿಧಾನವು ನಿಯಮಿಸಬಹುದಾದಂತೆ ಇರತಕ್ಕುದು.

(ಘ) ಆಯ್ಕೆ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಅಂಗೀಕರಿಸಲು ಕಾರ್ಯಕಾರಿ ಸಮಿತಿಗೆ ಸಾಧ್ಯವಾಗದಿದ್ದರೆ, ಅದು ಕಾರಣಗಳನ್ನು ಅಭಿಲೇಖಿಸಿ, ಅಂತಿಮ ಆದೇಶಗಳಿಗಾಗಿ ಪ್ರಕರಣವನ್ನು ಕುಲಾಧಿಪತಿಯವರಿಗೆ ಒಪ್ಪಿಸತಕ್ಕುದು.



(೬) ತಾತ್ಕಾಲಿಕ ಹುದ್ದೆಗಳಿಗೆ ಮಾಡುವ ನೇಮಕಾತಿಗಳನ್ನು ಈ ಕೆಳಗೆ ಸೂಚಿಸಲಾದಂತೆ ಮಾಡತಕ್ಕುದು.

(i) ತಾತ್ಕಾಲಿಕ ರಿಕ್ತತೆಯು ಒಂದು ಶೈಕ್ಷಣಿಕ ವರ್ಷಕ್ಕಿಂತ ಹೆಚ್ಚಿನ ಅವಧಿಯವರೆಗಿನದಾಗಿದ್ದರೆ, ಅದನ್ನು ಆಯ್ಕೆ ಸಮಿತಿಯ ಸಲಹೆಯೊಂದಿಗೆ, ಪೂರ್ವೋಕ್ತ ಉಪಬಂಧಗಳಲ್ಲಿ ಸೂಚಿಸಿರುವ ಪ್ರಕ್ರಿಯೆಗನುಸಾರವಾಗಿ ಭರ್ತಿ ಮಾಡತಕ್ಕುದು.

ಪರಂತು, ಕೆಲಸದ ಹಿತಾಸಕ್ತಿಯಲ್ಲಿ ರಿಕ್ತಸ್ಥಾನವನ್ನು ಭರ್ತಿ ಮಾಡುವುದು ಅಗತ್ಯವೆಂದು ಕುಲಪತಿಯವರಿಗೆ ಮನದಟ್ಟಾದರೆ, (ii)ನೇ ಉಪಖಂಡದಲ್ಲಿ ಉಲ್ಲೇಖಿತವಾದ ಸ್ಥಳೀಯ ಆಯ್ಕೆ ಸಮಿತಿಯು ಆರು ತಿಂಗಳಿಗೆ ಮೀರದ ಅವಧಿಗೆ, ತಾತ್ಕಾಲಿಕ ಆಧಾರದ ಮೇಲೆ ನೇಮಕಾತಿ ಮಾಡಬಹುದು.

(ii) ತಾತ್ಕಾಲಿಕ ರಿಕ್ತಸ್ಥಾನವು ಒಂದು ವರ್ಷಕ್ಕಿಂತ ಕಡಿಮೆ ಅವಧಿಯದಾಗಿದ್ದರೆ ಅಂಥ ರಿಕ್ತಸ್ಥಾನಕ್ಕೆ ನೇಮಕಾತಿಯನ್ನು ಸಂಬಂಧಪಟ್ಟ ಫ್ಯಾಕಲ್ಟಿಯ ಡೀನ್, ಇಲಾಖಾ ಮುಖ್ಯಸ್ಥ ಹಾಗೂ ಕುಲಪತಿಯವರಿಂದ ನಾಮನಿರ್ದೇಶಿತರಾದ ವ್ಯಕ್ತಿ ಇವರನ್ನು ಒಳಗೊಂಡಿರುವ ಸ್ಥಳೀಯ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ಮಾಡತಕ್ಕುದು.

ಪರಂತು, ಒಬ್ಬನೇ ವ್ಯಕ್ತಿಯು ಡೀನ್ ಮತ್ತು ಇಲಾಖಾ ಮುಖ್ಯಸ್ಥರ ಪದವನ್ನು ಧಾರಣ ಮಾಡಿದ್ದರೆ ಆಯ್ಕೆ ಸಮಿತಿಯು ಕುಲಪತಿಯವರಿಂದ ನಾಮನಿರ್ದೇಶಿತರಾದ ಇಬ್ಬರು ವ್ಯಕ್ತಿಗಳನ್ನು ಒಳಗೊಂಡಿರಬಹುದು.

ಮತ್ತು ಪರಂತು, ಬೋಧಕ ಹುದ್ದೆಗಳಲ್ಲಿ ಮರಣ ಅಥವಾ ಇತರ ಯಾವುದೇ ಕಾರಣಕ್ಕಾಗಿ ಇದ್ದಕ್ಕಿದಂತೆ ಉಂಟಾದ ಆಕಸ್ಮಿಕ ರಿಕ್ತಸ್ಥಾನದ ಸಂದರ್ಭದಲ್ಲಿ ಡೀನರು, ತಾತ್ಕಾಲಿಕ ನೇಮಕಾತಿಯನ್ನು ಮಾಡಿ, ಅಂಥ ನೇಮಕಾತಿಯ ಬಗ್ಗೆ ಕುಲಪತಿಯವರಿಗೆ ಮತ್ತು ಕುಲಸಚಿವರಿಗೆ ವರದಿ ಮಾಡತಕ್ಕುದು.

(iii) ತಾತ್ಕಾಲಿಕವಾಗಿ ನೇಮಕಗೊಂಡ ಯಾವೊಬ್ಬ ಬೋಧಕನು ತಾನು ಈ ಪರಿನಿಯಮಗಳ ಅಡಿಯಲ್ಲಿ ನೇಮಕಾತಿಗಾಗಿ ಇರುವ ನಿಯತ ಆಯ್ಕೆ ಸಮಿತಿಯಿಂದ ಶಿಫಾರಸ್ಸು ಪಡೆಯದಿದ್ದರೆ, ಸಂದರ್ಭಾನುಸಾರ, ತಾತ್ಕಾಲಿಕ ಅಥವಾ ಖಾಯಂ ನೇಮಕಾತಿಗಾಗಿ ತದನಂತರ ಸ್ಥಳೀಯ ಆಯ್ಕೆ ಸಮಿತಿ ಅಥವಾ

ನಿಯತ ಆಯ್ಕೆ ಸಮಿತಿಯಿಂದ ಆಯ್ಕೆಗೊಂಡ ಹೊರತು, ಅಂಥ ತಾತ್ಕಾಲಿಕ ಉದ್ಯೋಗದಲ್ಲಿ ಮುಂದುವರಿಯತಕ್ಕುದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ.

**ಕೆ. ಈಶ್ವರಭಟ್ಟ,**
ಸರ್ಕಾರದ ಕಾರ್ಯದರ್ಶಿ ಹಾಗೂ ಪ್ರಾರೂಪಕಾರರು
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ